# ನೇಸರು

## ತಿಂಗಳೋಲೆ

₹ 5/-

PAGES 20

JULY 2022 | Nesaru Tingalole | Vol. XL - 7



## ಮುಂಬಯಿಯ ಕಡಲು ಉಕ್ಕಿ ಚಿಮ್ಮುತ್ತಿದೆ

ಮೈಸೂರು ಅಸೋಸಿಯೇಷನ್ ಮುಂಬೈ

**THE MYSORE ASSOCIATION, BOMBAY**

393, Bhau Daji Road, Matunga, Mumbai - 400 019. | Tel.: 2403 7065

Email : mysoreassociation.mumbai@gmail.com

# ಸುಶೀಲಾ ಆಚಾರ್ಯ ಸಂಸ್ಮರಣ

18.06.2022ರಂದು ಒಂದು ಅಪೂರ್ವ ಅನುಭವ. ಮುಂಬೈ ಮೈಸೂರು ಅಸೋಸಿಯೇಷನ್ನಿನಲ್ಲಿ ಸಂಗೀತಗಾರ್ತಿ ಸುಶೀಲಾ ಆಚಾರ್ಯ ಅವರ ಸಂಸ್ಮರಣೆ. 1974ರಿಂದ 1990ರ ವರೆಗೆ ಮೈಸೂರು ಅಸೋಸಿಯೇಷನ್ ಸದಸ್ಯರಿಗೆ ಸಂಗೀತ ಹೇಳಿ ಕೊಡುತ್ತಿದ್ದ ಮತ್ತು 1970ರಿಂದ 2000ದ ವರೆಗೆ ಪ್ರತಿ ವರ್ಷ ಅಲ್ಲಿಯ ಗಣೇಶನ ಹಬ್ಬದಲ್ಲಿ ಹಾಡುತ್ತಿದ್ದ ಸುಶೀಲಕ್ಕ ಮುಂಬಯಿ ಕನ್ನಡ-ತುಳು ಸಾಂಸ್ಕೃತಿಕ ಲೋಕ ಮತ್ತು ಚಿನ್ಮಯ ಮಿಶನ್‌ನಲ್ಲಿ ತುಂಬ ಬೇಕಾದವರು.




ಆತ್ಮೀಯ ನುಡಿಗಳ ಸರಳ ಜೀವಿ. ಮಗಳು ಶ್ರೀಮತಿ ಪ್ರಮೋದಿನಿ ರಾವ್ ಈಗ ಪುಣೆಯ ಬಳಿ ಇರುವ ಚಿನ್ಮಯ ವಿಶ್ವವಿದ್ಯಾಪೀಠದಲ್ಲಿ ಸಂಗೀತ ವಿಭಾಗದ ಮುಖ್ಯಸ್ಥೆ. ನಿನ್ನೆ ಸಂಜೆ ಪ್ರಮೋದಿನಿ ಹಾಡಿದ್ದು ತನ್ನಮ್ಮ ರಾಗ ಸಂಯೋಜನೆ ಮಾಡಿದ ಕನ್ನಡ ಹಾಡುಗಳನ್ನೇ. ಜಿ.ಎಸ್.ಎಸ್, ಪುತಿನ, ಕುವೆಂಪು, ದ.ರಾ.ಬೇಂದ್ರೆ ಮೊದಲಾದ ಕವಿಗಳ ಹಾಡುಗಳು ಜೊತೆಗೆ ದಾಸರ ಪದ್ಯಗಳ ಔತಣ ಆಸಕ್ತರಿಗೆ.



ನೂಲಿನಂತೆ ಸೀರೆ. ಈಗೀಗ ಥೇಟು ಸುಶೀಲಕ್ಕನಂತೆ ಕಾಣಿಸುವ ಪ್ರಮೋದಿನಿ, ತಾಯಿಯ ಗೌರವಾರ್ಥ ಚಿನ್ಮಯ ಮಿಶನ್‌ನಲ್ಲಿ ಸುಶೀಲ ವಂದನ್ ಎಂಬ ಆನ್‌ಲೈನ್ ಸಂಗೀತ ಮೇಳವನ್ನು ಆಯೋಜಿಸಿ, ಪ್ರಸಿದ್ಧ ಸಂಗೀತಗಾರರ ಸಹಕಾರದೊಂದಿಗೆ ಅರ್ಹ ಮಕ್ಕಳಿಗೆ ಸಂಗೀತಾಭ್ಯಾಸಕ್ಕೆ ಅನುವು ಮಾಡಿ ಕೊಡುವ ಒಂದು ನಿಧಿಯನ್ನು ಸ್ಥಾಪಿಸಿದ್ದಾರೆ. ಕೇಳಿ ಖುಶಿಯಾಯ್ತು.



ಯಾವ ಹಮ್ಮುಬಿಮ್ಮು ಇಲ್ಲದ ಪ್ರಮೋದಿನಿ ಹಾಡುಗಳ ನಡುವೆ ಸಭಿಕರ ಜೊತೆ ಕೆಲವು ಸಂಗತಿಗಳನ್ನು ಸಂಕ್ಷಿಪ್ತವಾಗಿ ಹಂಚಿಕೊಂಡರು. ಸಭಿಕರೂ ಅಷ್ಟೇ ಪ್ರೀತಿಯಿಂದ ಪಾಲ್ಗೊಂಡರು. ಮುಂಬಯಿ ಕನ್ನಡ ಸಂಘ



ಸಂಸ್ಥೆಗಳಲ್ಲಿ ಕಾಣ ಸಿಗುವ ಮನೆಯ ವಾತಾವರಣ ಮತ್ತಷ್ಟು ಆಪ್ತವೆನಿಸಿತು.

ಬೇಂದ್ರೆ ಹಾಡಿನ ಸಂದರ್ಭ. ವಿಜ್ಞಾನಿ, ಉದ್ಯಮಿ, ನಾಟಕಕಾರ, ಸಂಘಟಕ ಡಾ. ಮಂಜುನಾಥ್ ಹೇಳಿದ ಒಂದು ಘಟನೆಯನ್ನು ಪ್ರಸ್ತಾಪಿಸಲೇಬೇಕು. ಬೇಂದ್ರೆಯವರು ತೀರಿಕೊಂಡದ್ದು ಮುಂಬೈಯಲ್ಲಂತೆ. ಸುದ್ದಿ ತಿಳಿದ ತಕ್ಷಣ ಡಾಕ್ಟರ್ ಮಾಮಾ (ಡಾ. ಮಂಜುನಾಥರನ್ನು ಹೆಚ್ಚಿನವರು ಹಾಗೇ ಕರೆಯುವುದು) ಮತ್ತು ಮಂಜುನಾಥಯ್ಯ ಅಲ್ಲಿಗೆ ಧಾವಿಸಿ ಕೊನೆಯ ದರ್ಶನ ಮಾಡಿದರಂತೆ. “ಸುಶೀಲಕ್ಕ ಹೇಳಿಕೊಟ್ಟ ‘ನನ್ನ ಹರಣ ನಿನಗೆ ಶರಣ’ ಹಾಡನ್ನು ಅಲ್ಲೇ ಹಾಡಿ ಬೇಂದ್ರೆಯವರಿಗೆ ನಮನ ಸಲ್ಲಿಸಿದೆವ” ಎಂದು ಅವರು ಸಭೆಯಲ್ಲಿ ಕೂತ್ಕೊಂಡೇ ಹೇಳಿದಾಗ ಗದ್ಗದಿತರಾಗಿದ್ದರು.

ಸಂಗೀತವನ್ನು ಆಸ್ವಾದಿಸುವಾಗ ಕಣ್ಮುಚ್ಚಿಕೊಂಡಿರೋದು ಸಹಜ. ಮುಖವಾಡವನ್ನೂ ತೆಗೆದೆ ಅನ್ನಿ.

ವರದಿ : **ಅಹಲ್ಯಾ ಬಲ್ಲಾಳ್**

ಫೋಟೋ: **ಎಚ್. ಆರ್. ಎಲ್. ವೆಂಕಟೇಶ್**

ಸಂಪಾದಕೀಯ

ನೇಸರು ತಿಂಗಳೋಲೆ

ಸಂಪುಟ 40 ಜುಲೈ–2022 ಸಂಚಿಕೆ 7

# ವರ್ಷಋತು



✍ ಡಾ. ಜ್ಯೋತಿ ಸತೀಶ್

ವರ್ಷ ಋತು ಬಂತೆಂದರೆ ಸಾಕು. ಮನಸ್ಸಿಗೆ ಒಂದು ರೀತಿಯ ಉಲ್ಲಾಸ. ಮಳೆಯ ಆಹ್ಲಾದವನ್ನು ಆಸ್ವಾದಿಸುವ ಕಾಲ. ನಮ್ಮದು ಹಳ್ಳಿ ಕಡೆ. ಮಳೆಗಾಲದಲ್ಲಿ ನಮ್ಮ ಕಡೆ ಸಾಗುವಳಿ ಕೆಲಸ ಆರಂಭವಾಗುತ್ತದೆ. ಮಳೆಗಾಲ ಬಂತೆಂದರೆ ಸಾಕು, ಹಳ್ಳಿಗರಿಗೆ ಗದ್ದೆ ನೆಟ್ಟಿಯ ಚಿಂತೆ. ಈ ಸಲ ಹಾಕಿದ ಬೀಜ ಸರಿಯಾಗಿ ಹುಟ್ಟುತ್ತದೋ ಇಲ್ಲವೋ, ಒಂದು ವೇಳೆ ಸಸಿ ಕಡಿಮೆಯಾದರೆ ಎಲ್ಲಿಂದ ತರುವುದು. ಹಿಂದೆ 10 ಆಳುಗಳು ಮಾಡುತ್ತಿದ್ದ ಕೆಲಸವನ್ನು ಈಗ ಮೆಷಿನ್ ಒಂದೇ ಮಾಡುತ್ತದೆ. ಈಗ ಮೊದಲಿನ ಹಾಗೆ ಆಳುಗಳು ಸಿಗುತ್ತಿಲ್ಲ. ಇವತ್ತು ಅವರು ನಮ್ಮ ಗದ್ದೆಯ ಕೆಲಸಕ್ಕೆ ಬಂದಿದ್ದಾರೆ, ನಾಳೆ ಅವರ ಗದ್ದೆಯ ಕೆಲಸಕ್ಕೆ ಹೋಗಬೇಕು ಇದು ಮೊದಲಿನಿಂದಲೂ ನಡೆದುಕೊಂಡು ಬರುತ್ತಿದ್ದ ಪದ್ಧತಿ. ಆದರೆ ಈಗ ಎಲ್ಲರೂ ಬೇಸಾಯ ಮಾಡುವುದನ್ನು ಬಿಟ್ಟು ಬೇರೆ ಕಡೆ ಮನಸ್ಸನ್ನು ವಾಲಿಸಿದ್ದ ರಿಂದ ಆಳುಗಳ ಕೊರತೆ ಕಾಡ ತೊಡಗಿದೆ. ಭೂಮಿಯಾಯಿಯನ್ನ ನಂಬಿದರೆ ಅವಳು ಯಾವತ್ತೂ ಕೈಬಿಡಲಾರಳು ಎನ್ನುವ ಸತ್ಯವನ್ನ ಮರೆತಿದ್ದೇವೆ ನಾವೆಲ್ಲ.

ನಮ್ಮ ಮನೆಯ ಹಿಂದೆ-ಮುಂದೆ ಎಲ್ಲ ಕಡೆ ಗದ್ದೆ, ಮಳೆಯ ರಭಸ ಜಾಸ್ತಿಯಾದಾಗಲೆಲ್ಲ ಎಲ್ಲೆಡೆ ನೀರು ತುಂಬುತ್ತದೆ. ಆಗ ನಮ್ಮ ಹಳ್ಳಿನೂ ಒಂದು ದ್ವೀಪದ ಹಾಗೆ ಕಾಣುತ್ತದೆ. ನಾವು ಚಿಕ್ಕವರಿರುವಾಗ ಗದ್ದೆಯಲ್ಲಿ ತುಂಬಿದ ನೀರು ಮನೆಯ ಅಂಗಳದ ಕಡೆ ಹರಿಯಲಾರಂಭಿಸಿದರೆ ಸಾಕು, ಆ ನೀರಿನಲ್ಲಿ ನಾವು ಕಾಗದದ ದೋಣಿ ಬಿಡಲಿಕ್ಕೆ ಏನೋ ಒಂದು ರೀತಿಯ ಖುಷಿ. ಹಳೆಯ ನೋಟ್ ಪುಸ್ತಕದ ಹಾಳೆಗಳನ್ನು ಹರಿದು ದೋಣಿ ಮಾಡಿ, ನೀರಲ್ಲಿ ಹರಿಯ ಬಿಟ್ಟಾಗ, ಯಾರ ದೋಣಿ ಮುಂದೆ ಸರಾಗವಾಗಿ ಹೋಯಿತು ಎಂದು ನೋಡುವ ಕುತೂಹಲವನ್ನು ಪದಗಳಲ್ಲಿ ವರ್ಣಿಸಲು ಸಾಧ್ಯವಿಲ್ಲ. ಮಳೆಗಾಲದಲ್ಲಿ ನಾವು ಆಡುತ್ತಿದ ಆಟಗಳ ಬಗ್ಗೆ ಈಗಿನ ಮಕ್ಕಳಿಗೆ ಏನು ಗೊತ್ತಿಲ್ಲ. ಅವರಿಗೆ ಮೊಬೈಲ್ ಬಿಟ್ಟರೆ ಬೇರೆ ಪ್ರಪಂಚವೇ ಗೊತ್ತಿಲ್ಲ. ಆವಾಗಿನ ನಮ್ಮ ಬಾಲ್ಯ ದಿನಗಳನ್ನು ನೆನೆಸಿಕೊಂಡರೆ ಸಾಕು ಮೈಯೆಲ್ಲ ರೋಮಾಂಚನವಾಗುತ್ತದೆ.

ಇಂದು ನಮ್ಮ ಹಳ್ಳಿ ಕಡೆ ಹೋದರೆ ಸಾಕು, ಅದನ್ನು ನಮ್ಮ ಹಳ್ಳಿ ಎಂದು ಹೇಳುವುದಕ್ಕಿಂತಲೂ ನಗರಪ್ರದೇಶ ಎಂದು ಹೇಳಿದರೂ ತಪ್ಪಾಗಲಿಕ್ಕಿಲ್ಲ. ಹಿಂದೆ ಊರಿನಲ್ಲಿ ಅಬ್ಬಬ್ಬ ಅಂದ್ರೆ ಒಂದು 20 ರಿಂದ 30 ಮನೆಗಳಿದ್ದವು. ಈಗ ಅದೇ ಹಳ್ಳಿಯಲ್ಲಿ 200 ರಿಂದ 300 ಮನೆಗಳಿವೆ. ಯಾಕೆಂದರೆ ಎಲ್ಲರೂ ವ್ಯವಸಾಯ ಬಿಟ್ಟು ಗದ್ದೆಗಳಲ್ಲಿ ಮನೆ ಕಟ್ಟಿಕೊಂಡಿದ್ದಾರೆ. ಒಂದು ಮನೆಯಲ್ಲಿ ನಾಲ್ಕು ಗದ್ದೆಯಿದ್ದು, ನಾಲ್ಕು ಜನ ಅಣ್ಣ ತಮ್ಮಂದಿರು ಇದ್ದರೆ, ಎಲ್ಲರದ್ದೂ ಒಂದೊಂದು ಮನೆ. ವ್ಯವಸಾಯ ಮಾಡುವ ಗದ್ದೆಗಳಲ್ಲಿ ಮನೆ ಕಟ್ಟಿಕೊಂಡಿದ್ದರಿಂದ ಮಳೆಗಾಲದಲ್ಲಿ

ನೀರು ಸರಾಗವಾಗಿ ಹರಿದುಹೋಗಲು ಸ್ವಲ್ಪಾವಕಾಶ ಸಾಲದೆ ನೀರಿನ ಮಟ್ಟ ಏರತೊಡಗಿ, ಮನೆಯ ಅಂಗಳವೆಲ್ಲ ಜಲಾವೃತ ವಾಗುವ ಪರಿಸ್ಥಿತಿ ಬಂದಿದೆ. ಹಿಂದೆ ಎಷ್ಟು ಹೊತ್ತು ಮಳೆ ಸುರಿದರೂ, ಸುಮಾರಿಗೆ ನೀರು ತುಂಬುವ ಪ್ರಮೇಯವೇ ಬರುತ್ತಿರಲಿಲ್ಲ. ಈಗ ಹಳ್ಳಿಗಳಲ್ಲೂ ನಗರ ಪ್ರದೇಶದ ಹಾಗೆ, ಒಂದು ಎರಡು ಗಂಟೆ ನಿರಂತರವಾಗಿ ಮಳೆ ಸುರಿದರೆ ಸಾಕು, ಎಲ್ಲ ಕಡೆ ನೀರು ತುಂಬಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ.

ಆಗೆಲ್ಲಾ ಮಳೆಗಾಲ ಎಂದರೆ ಜೂನ್‌ನಿಂದ ಸೆಪ್ಟಂಬರ್‌ವರೆಗೆ ದಿನವೂ ಮಳೆ ಬಂದೇ ಬರುತ್ತಿತ್ತು. ಕೆಲವೊಂದು ದಿನ ಜಾಸ್ತಿ ಕೆಲವೊಮ್ಮೆ ಕಡಿಮೆ ಅಷ್ಟೇ ವ್ಯತ್ಯಾಸ. ಈಗ ನಗರೀಕರಣದ ಭರದಲ್ಲಿ ಕಾಡು ನಾಶವಾಗಿ ಹಿಂದಿನಷ್ಟು ಮಳೆಯೂ ಬರುತ್ತಿಲ್ಲ. ಕೆಲಸಗಾರರ ಅಭಾವದಿಂದ ವ್ಯವಸಾಯ ಮಾಡುವವರು ಕಡಿಮೆಯಾಗಿದ್ದಾರೆ. ಮನೆಯಂಗಳದವರೆಗೂ ವಾಹನ ಹೋಗುವವರೇ ರಸ್ತೆ ನಿರ್ಮಿಸಲಾಗಿದೆ. ಒಂದು ಮಾತು ಮಾತ್ರ ಸತ್ಯ, ಮನುಷ್ಯನಿಗೆ ಸವಲತ್ತು ಹೆಚ್ಚಾದ ಹಾಗೆ, ಸೋಮಾರಿತನ ಬರುತ್ತೆ ಜೊತೆಗೆ ದೇಹಕ್ಕೆ ಮೊದಲಿನ ಹಾಗೆ ಕಸರತ್ತು ದೊರಕದಿದ್ದ ಕಾರಣ, ಇದ್ದಬದ್ದ ಕಾಯಿಲೆಗಳೆಲ್ಲ ಬಂದು ಮನೆ ಮಾಡತೊಡಗಿದೆ.

ಗೌ. ಸಂಪಾದಕರು
ಡಾ. ಜ್ಯೋತಿ ಸತೀಶ್
***

ಸಂಪಾದಕ ಮಂಡಳಿ:
ಡಾ. ಮಂಜುನಾಥ್
ಕೆ. ಮಂಜುನಾಥಯ್ಯ
ನಾರಾಯಣ ನವಿಲೇಕರ್
ಗಣಪತಿ ಶಂಕರಲಿಂಗ
ನೀಲಕಂಠ
***

ಬೆಂಗಳೂರು ಪ್ರತಿನಿಧಿ
ಎಂ. ಎ. ಎನ್. ಪ್ರಸಾದ್
***

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ.

– ಸಂ.

The views expressed by the contributors in this journal are theirs and not of the Association and the Association is not in anyway responsible for the same.

- Ed.

****

ಸಂಪರ್ಕ ವಿಳಾಸ:
ನೇಸರು
ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ,
ಮಾಟುಂಗ
ಮುಂಬಯಿ – 400 019.
☎24024647 / 24037065
Email:
Mysoreassociation.mumbai@gmail.com
Website:
www.mysoreassociation.in

# ಹಿಂದೂ ಧರ್ಮದ ಮೂಲ ತತ್ವವೇನು?



**ಡಾ. ಬಿ. ಆರ್. ಮಂಜುನಾಥ್**

ಈಗ ನಮ್ಮ ನಾಡಿನಲ್ಲಿ ಹರಡಿರುವ ಮತಗಳು, ಸಿದ್ಧಾಂತಗಳು ಹಲವಾರು. ನಂಬಿಕೆಯೇ ಇವುಗಳ ಬೇರು. ನಮ್ಮಲ್ಲಿ ಹಲವರು, ವೇದಗಳೇ ನಮ್ಮ ಧರ್ಮದ ಮೂಲ, ಎಂದೆನ್ನುವುದರಲ್ಲಿ ಏನೂ ಹುರುಳಿಲ್ಲ. ವೇದಗಳನ್ನು ನಂಬದಿರುವ ಹಲವಾರು ಮತಗಳು ನಮ್ಮ ನಾಡಿನಲ್ಲಿವೆ. ವೀರಶೈವರು ವೇದಗಳನ್ನು ಒಪ್ಪುವುದಿಲ್ಲ. ಕರುಮಾರಿಯಮ್ಮ ಮುನೀಶ್ವರನನ್ನು ಪೂಜಿಸುವರು ಕೂಡ ವೇದಗಳನ್ನು ಒಪ್ಪುವುದಿಲ್ಲ. ವೇದಗಳಲ್ಲಿ ಅಗ್ರಗಣ್ಯ ದೇವನಾದ ಇಂದ್ರನಿಗೆ ಯಾರೂ ಸೊಪ್ಪು ಹಾಕುವುದಿಲ್ಲ. ಹಾಗಾದರೆ ಹಿಂದೂ ಧರ್ಮವೆಂದರೇನು ಎನ್ನುವ ಪ್ರಶ್ನೆಗೆ ಉತ್ತರ ಬೇಗ ಸಿಗುವುದಿಲ್ಲ. ಇಲ್ಲಿಯೇ ಬೆಳೆದು ಬಂದ ನಂಬಿಕೆಗಳು, ಮತಗಳೆಲ್ಲವೂ ಸೇರಿದರೆ, ಅದನ್ನು ಹಿಂದೂ ಧರ್ಮವೆನ್ನಬಹುದು. "ಹಿಂದೂ" ಎನ್ನುವ ಹೆಸರನ್ನು ನಮಗೆ ಕೊಟ್ಟವರು ಇರಾನಿನವರು. ಸಿಂಧೂ ನದಿಯಾಚೆ ಇರುವವರೆಲ್ಲಾ ಹಿಂದೂಗಳು ಎಂದು ಅವರು ಹೆಸರಿಟ್ಟಿದ್ದರು.

ಬ್ರಿಟನ್ನಿನಲ್ಲಿ ಮೊಟ್ಟ ಮೊದಲು ಜನಗಣತಿ 1882 ರಲ್ಲಿ ಆಯಿತು. ಅದಾದ ಮೇಲೆ ಇಂಡಿಯಾದಲ್ಲಿಯೂ ಜನಗಣತಿ ಮಾಡಬೇಕೆಂದು ಬ್ರಿಟಿಷರು ಅಣಿ ಮಾಡಿದರು. ಜನರ ಸಂಖ್ಯೆ, ಎಲ್ಲೆಲ್ಲಿ ಎಷ್ಟೆಷ್ಟು, ಅವರ ಮತಗಳೇನು ಹೆಣ್ಣುಗಳು-ಗಂಡುಗಳು-ಮಕ್ಕಳು ಎಷ್ಟೆಷ್ಟು? ಎಂದು ಅವರ ಪಟ್ಟಿಯನ್ನು ಅಣಿ ಮಾಡಿ, ಜನಗಣತಿ ಮಾಡಿದರು. ನಿಮ್ಮ ಮತವೇನು? ಎಂದು ಕೇಳಿದಾಗ ಮುಸಲ್ಮಾನರು, ಕ್ರೈಸ್ತರು, ಬೌದ್ದರು, ಸಿಖ್ಖರು ಸರಿಯಾದ ಉತ್ತರ ಕೊಟ್ಟರು. ಆದರೆ ತಮ್ಮ ಮತವೇನು ಎನ್ನುವುದಕ್ಕೆ ಸುಮಾರು 85 ರಷ್ಟು ಜನರಿಂದ ಉತ್ತರವೇ ಬರಲಿಲ್ಲ. ಅವರೆಲ್ಲರಿಗೂ ಬ್ರಿಟಿಷರು 'ಹಿಂದು' ಎನ್ನುವ ಹೆಸರಿಟ್ಟರು. ಹೀಗಾಗಿ ಹಿಂದು ಎನ್ನುವುದು, ಈ ನಾಡಿನ ಹೆಸರೇ ಹೊರತು ಯಾವ ಧರ್ಮದ ಹೆಸರೂ ಅಲ್ಲ.

ಇರಬಹುದು, ಆದರೆ ಜನರ ವಾಡಿಕೆ, ನಂಬಿಕೆ, ನಡೆವಳಿಕೆ ಇವುಗಳಲ್ಲಿ ಏನಾದರೂ ಸಾಮಾನ್ಯವಾದವು ಇವೆಯೇ? ಇವೆ. ವೇದಗಳಲ್ಲಿ ಯಾವ ದೊಡ್ಡ ಹೆಣ್ಣು ದೇವತೆಗಳೂ ಇಲ್ಲ. ಉಷನ್, ರಾಷ್ಟ್ರೀ ಎನ್ನುವ ಸಣ್ಣ ದೇವತೆಗಳಿವೆ. ಅಲ್ಲಿ ಭೂದೇವಿಯ ಹೆಸರೂ ಇಲ್ಲ. ಆದರೆ ಇಲ್ಲಿಯ ಎಲ್ಲಾ ಮತಗಳಲ್ಲೂ "ತಾಯಿ" ದೇವತೆಯೇ ಪ್ರಾಧಾನ್ಯಳಾಗಿ ಕಾಣುತ್ತಾಳೆ. ಕರುಮಾರಿ, ಕಾಳಿ, ಚಾಮುಂಡೇಶ್ವರಿ, ಬನಶಂಕರಿ, ಲಕ್ಷ್ಮೀ, ಭೂಮಾತೆ, ಆದಿಶಕ್ತಿಯಾಗಿ ವಿಜೃಂಭಿಸುತ್ತಾಳೆ. ಈಗಿನ "ಭಾರತಮಾತೆ" ಈ ನೆಚ್ಚಿಕೆಯ ಒಬ್ಬ ತಾಯಿ. ಯುರೋಪ್, ಚೈನಾ, ಜಪಾನ್ ನಲ್ಲಿ ಯಾರೂ ನಮ್ಮ "ತಾಯಿನಾಡು" ಎಂದು ಹೇಳುವುದಿಲ್ಲ. ನಮ್ಮ "ಪಿತೃದೇಶ" ಎಂದೇ ಕರೆಯುವುದು. ಅಲ್ಲಿ Father of the Nation ಇರುತ್ತಾನೆಯೇ ಹೊರತು, "ಮಾತೆ" ಇರುವುದಿಲ್ಲ. ನಮ್ಮಲ್ಲಿ "ತಾಯಿನುಡಿ" ಇರುತ್ತದೆಯೇ ಹೊರತು "ತಂದೆನುಡಿ" ಇರುವುದಿಲ್ಲ. ಹೀಗೆ ನಮ್ಮ ನಾಡಿನಲ್ಲಿ 'ತಾಯಿ' ಎಲ್ಲರಿಗಿಂತ ದೊಡ್ಡವಳು. ಅವಳೇ ಆದಿಶಕ್ತಿ. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಊರ ಹಾಗೂ ಗ್ರಾಮದೇವತೆ, ತಾಯಿಯೇ. ಇದು ನಾಡಿನ ನೆಚ್ಚಿಕೆಯ ಬೇರು.

ಬೇರೆಲೆಲ್ಲಿಯೂ ಒಬ್ಬ ದೇವರು ಇರುತ್ತಾನೆ. ಸತ್ತ ಮೇಲೆ ಅವನು ನಮ್ಮನ್ನು ತೀರ್ಮಾನಿಸಿ, ಸ್ವರ್ಗಕ್ಕೋ ಇಲ್ಲವೇ ನರಕಕ್ಕೂ ತಳ್ಳುತ್ತಾನೆ. ಕ್ರೈಸ್ತ ಮತ, ಇಸ್ಲಾಂ ನಲ್ಲಿ ಆ ದೇವ ಈ ಜಗತ್ತು ಮುಗಿದ ಮೇಲೆ, ಎಲ್ಲರನ್ನೂ ಮತ್ತೆ ಎಬ್ಬಿಸಿ, ಶಿಕ್ಷೆಯನ್ನು ನೀಡುತ್ತಾನೆ.

ಆದರೆ ನಮ್ಮಲ್ಲಿ, "ನಾವು ಮಾಡಿದ್ದನ್ನು ನಾವು ಉಣ್ಣಲೇ ಬೇಕು". ಇದಕ್ಕೆ ಕರ್ಮ ಎಂದು ಕರೆಯುತ್ತಾರೆ. ಯಾವ ದೇವನೂ ನಮ್ಮನ್ನು ಶಿಕ್ಷಿಸುವುದಿಲ್ಲ. ಪ್ರತಿದಿನ ನಾವು ಮಾಡಿದ ಕರ್ಮದ ಫಲವನ್ನು ಅನುಭವಿಸುತ್ತೇವೆ. ಅಂತೆಯೇ ನಾವು ಸತ್ತ ಮೇಲೆ ಮುಗಿಯುವುದಿಲ್ಲ. ನಾವು ಮತ್ತೆ ಮತ್ತೆ ಹುಟ್ಟಿ ಬರುತ್ತೇವೆ. ಯಾವಾಗಲೂ ಮಾನವರಾಗಿಯೇ ಹುಟ್ಟುವುದಿಲ್ಲ. ಆಕಾರ ಬೇರೆ ಬೇರೆಯಾದರೂ ಹಿಂದೆ ಮಾಡಿದ ಕರ್ಮದ ಫಲವನ್ನು ಅನುಭವಿಸುತ್ತಲೇ ನಡೆಯುತ್ತೇವೆ.

ನಮ್ಮಲ್ಲಿ ಒಳ್ಳೆಯದು, ಕೆಟ್ಟದ್ದು ಎನ್ನುವುದು ನಾವು ಬಯಸಿದರ ಮೇಲೆ ನಿಂತಿದೆ. ಯಾರನ್ನಾದರೂ ಕೊಲ್ಲುವುದು ಒಳ್ಳೆಯದು ಎನಿಸುತ್ತದೆ ಅಲ್ಲವೇ?

ನಮಗಾಗಿ ನಾವು ಏನಾದರೂ ಬಯಸಿದರೆ, ಅದು ಆ ಆಸೆಗೆ ಅಂಟಿ ಬರುವ ಕರ್ಮಫಲವನ್ನೂ ತರುತ್ತದೆ.

ಈ ಹುಟ್ಟು - ಸಾವು- ಮರುಹುಟ್ಟಿನ ಗಾಲಿ ಎಂದಾದರೂ ನಿಲ್ಲುತ್ತದೆಯೇ? ಈ ಜಗತ್ತು ಯಾವಾತ್ತಾದರೂ ಕೊನೆಗಾಣುತ್ತದೆಯೇ? ಎಂದೂ ಇಲ್ಲ. ಆಕಾರ ಬದಲಾಗುತ್ತದೆಯೇ ಹೊರತು ಜಗತ್ತು ಎಂದೆಂದೂ ನಡೆಯುತ್ತಲೇ ಇರುತ್ತದೆ.

ಆದರೆ 'ಮೋಕ್ಷ' ಎನ್ನುತ್ತಾರಲ್ಲ, ಹೌದು ಆದರೆ ಮೋಕ್ಷದ ಅರ್ಥ ಬೇರೆ ಬೇರೆ ಸಿದ್ಧಾಂತಗಳಲ್ಲಿ ಬೇರೆ ಬೇರೆಯಾಗಿದೆ. ದ್ವೈತದಲ್ಲಿ ಈ ಹುಟ್ಟು ಸಾವುಗಳ ಗಾಲಿ ನಿಂತು, ಆ ದೇವನ ಪಾದಾರವಿಂದದಲ್ಲಿ ಇರುತ್ತೇವೆ ಎಂದರೆ, ಅದ್ವೈತದಲ್ಲಿ ನಾವು ನಿಷ್ಕಾಮವಾಗಿ ಏನೇನು ಬಯಸದೆ ಪ್ರಕೃತಿ ನಿಯಮವಾಗಿ ಬದುಕಿದರೆ ಯಾವ ಕರ್ಮವೂ ನಿಮ್ಮನ್ನು ಹಿಂಬಾಲಿಸದೆ ನಾವು ಕರ್ಮದಿಂದ ಮುಕ್ತಿಯನ್ನು ಪಡೆಯುತ್ತೇವೆ. ಆದರೆ ಹುಟ್ಟು-ಸಾವಿನ ಗಾಲಿ ತಿರುಗುತ್ತಲೇ ಇರುತ್ತದೆ. ಇನ್ನು ನಾವು ಸತ್ತ ಮೇಲೆ ಮಾಡುವ ಕರ್ಮ. ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ಜೀವವಿಲ್ಲದ ದೇಹವನ್ನು ಸುಟ್ಟರೆ ಇನ್ನುಳಿದ ಮಂದಿ ಆ ದೇಹವನ್ನು ಹೂಳುತ್ತಾರೆ. ಸುಡುವವರು ಮೇಲೆ ಹೋಗುವ ಹೊಗೆಯನ್ನು ನೋಡಿ, ಅವರು ದೇವಲೋಕವನ್ನು ಸೇರಿದರೆಂದು ತಿಳಿದರೆ, ಇನ್ನುಳಿದವರು ಮತ್ತೆ ತಾಯಿಯ ಮಡಿಲನ್ನು ಸೇರುತ್ತಾರೆ ಎಂದು ತಿಳಿಯುತ್ತಾರೆ. ಈ ಎಲ್ಲಾ ಬೇರೆ ಬೇರೆ ವಾಡಿಕೆಗಳ ನಡುವೆ, "ತಾಯಿ" "ಹುಟ್ಟು -ಸಾವು" ಗಳ ಗಾಲಿ, ಕರ್ಮಫಲ ಇವುಗಳೇ ಹಿಂದೂ ಧರ್ಮದ ಮೂಲ ತತ್ವಗಳು.

# ಸ್ವಾತಂತ್ರ್ಯ ಹೋರಾಟದ ಒಂದು ದುರಂತ ಅಧ್ಯಾಯ : ಭೂಲಾಭಾಯ್ ದೇಸಾಯಿ



✍ **ನಾರಾಯಣ ನವಿಲೇಕರ್**

ಭಾರತದ ಸ್ವಾತಂತ್ರ್ಯ ಹೋರಾಟದ ದೀರ್ಘ ಇತಿಹಾಸದಲ್ಲಿ ಸಾವಿರಾರು ಘಟನೆಗಳು ಆಗಿಹೋಗಿವೆ. ಕೆಲವು ಘಟನೆಗಳು ಸಾರ್ವಜನಿಕರ ಮನಸ್ಸಿನಲ್ಲಿ ಉಳಿದುಹೋಗಿದ್ದರೂ, ಇನ್ನೂ ಅನೇಕ ಘಟನೆಗಳು ಮರೆಯಾಗಿವೆ. ಇದು ಅಂತಹಾ ಒಂದು ಮರೆಯಾದ ಘಟನೆಯನ್ನು ನೆನಪಿಸುವ ಲೇಖನ. ಇದರ ದುರಂತ ನಾಯಕ ಭೂಲಾಭಾಯಿ ದೇಸಾಯಿ.

ಈ ಭೂಲಾಭಾಯಿ ದೇಸಾಯಿ ಹುಟ್ಟಿದ್ದು, ಬೆಳೆದದ್ದು ಗುಜರಾತಿನಲ್ಲಿಯಾದರೂ, ಮುಂದೆ ಕಾನೂನು ಓದಿ ವಕಾಲತ್ತನ್ನು ಶುರುಮಾಡಿದ್ದು ಮುಂಬಯಿಯಲ್ಲಿ, ೨೦ನೇ ಶತಮಾನದ ಮೊದಲ ದಶಕದಲ್ಲಿ. ಮುಂದೆ ತನ್ನ ಬುದ್ಧಿಮತ್ತೆ, ಪರಿಶ್ರಮದಿಂದ ಯಶಸ್ಸು ಹಾಗೂ ಪ್ರಸಿದ್ಧಿಯನ್ನು ಪಡೆದರು. ಇಂಥಹವರು ಆಗ ಕಾವೇರುತ್ತಿದ್ದ ಸ್ವಾತಂತ್ರ್ಯ ಚಳುವಳಿಯತ್ತ ಆಕರ್ಷಿತರಾದದ್ದು ಸಹಜವಾಗಿತ್ತು. ಆಗ ಆನಿ ಬೆಸೆಂಟ್ ಪ್ರತಿಪಾದಿಸುತ್ತಿದ್ದ "Home Rule League" ಎಂಬ ಸಂಸ್ಥೆಯಲ್ಲಿ ಭೂಲಾಭಾಯಿ ಕ್ರಿಯಾಶೀಲರಾದರು. ಮುಂದೆ ಅದನ್ನು ಬಿಟ್ಟು "Liberal Party" ಯನ್ನು ಸೇರಿದರು.

ಭೂಲಾಭಾಯಿಗೆ ಸಾರ್ವಜನಿಕವಾಗಿ ತುಂಬಾ ಪ್ರಸಿದ್ಧಿಯನ್ನು ತಂದುಕೊಟ್ಟದ್ದು ಬಾರ್ಡೋಲಿ ಸತ್ಯಾಗ್ರಹದ ನಂತರ ಅಲ್ಲಿ ಅವರು ಮಾಡಿದ ಕೆಲಸ. ಬಾರ್ಡೋಲಿ ಕರ ನಿರಾಕರಣೆಯ ಸತ್ಯಾಗ್ರಹ ನಮಗೆಲ್ಲಾ ತಿಳಿದದ್ದೇ ಆಗಿದೆ. ಗುಜರಾತಿನ ಬಾರ್ಡೋಲಿ ಪ್ರದೇಶದಲ್ಲಿ ಬ್ರಿಟಿಷ್ ಸರಕಾರ ಏಕಪಕ್ಷೀಯವಾಗಿ ಯದ್ವಾತದ್ವಾ ಏರಿಸಿದ ಭೂಕಂದಾಯದ ವಿರುದ್ಧ ಹಳ್ಳಿಗರನ್ನು ವಲ್ಲಭಭಾಯಿ ಪಟೇಲರು ಸಂಘಟಿಸಿ ಶುರುಮಾಡಿದ ಕರನಿರಾಕರಣೆ ಚಳುವಳಿ ಈಗ ಇತಿಹಾಸ. ಪಟೇಲರಿಗೆ "ಸರದಾರ್" ಎಂಬ ಬಿರುದು ಸಿಕ್ಕಿ. ಅವರು ದೇಶಾದ್ಯಂತ ಪ್ರಸಿದ್ಧರಾದದ್ದು ಈ ಹೋರಾಟದ ಕಾಲದಲ್ಲಿಯೇ. ಕರ ಹೆಚ್ಚು ಮಾಡಿರುವುದನ್ನು ರದ್ದು ಮಾಡಿ, ಹೊಸ ಸಮಿತಿಯನ್ನು ನೇಮಿಸಿ ಸಾರ್ವಜನಿಕರ ಅಹವಾಲುಗಳ, ತಥ್ಯಗಳ ಆಧಾರದ ಮೇಲೆ ಹೊಸ ಕರವನ್ನು ನಿಗದಿ ಮಾಡಬೇಕು ಎಂಬ ಹಳ್ಳಿಗರ ಬೇಡಿಕೆ ಮಣಿದ ಬ್ರಿಟಿಷ್ ಸರಕಾರ ಅದರಂತೆ ಹೊಸ ಸಮಿತಿಯೊಂದನ್ನು ನೇಮಿಸಿದರು. ಆ ಸಮಿತಿಯ ಮುಂದೆ ಹಳ್ಳಿಗರ ಪರವಾಗಿ ವಾದ ಮಾಡಲು ಮಹಾತ್ಮಾ ಗಾಂಧಿ ಇದೇ ಭೂಲಾಭಾಯಿ ದೇಸಾಯಿಯವರನ್ನು ಸರದಾರ್ ಪಟೇಲರ ಮೂಲಕ ನೇಮಿಸಿದರು. ಆಗಿನ್ನೂ ಭೂಲಾಭಾಯಿ ಕಾಂಗ್ರೆಸ್ ಪ್ರಾಥಮಿಕ ಸದಸ್ಯರೂ ಆಗಿರಲಿಲ್ಲ. ಮುಂದಿನ ಕೆಲವು ತಿಂಗಳು ಈ ಸಮಿತಿಯವರೊಂದಿಗೆ ಬಾರ್ಡೋಲಿಯಲ್ಲಿ ತಿರುಗಿ, ಅಂಕಿಅಂಶಗಳನ್ನು, ತಥ್ಯಗಳನ್ನು ಕಲೆಹಾಕಿ, ಚರ್ಚಿಸಿ, ಅವರು ಮಂಡಿಸಿದ ವಾದ ಯಶಸ್ವಿಯಾಯಿತು. ಸಮಿತಿ ಶಿಫಾರಸು ಮಾಡಿದ ಹೊಸ ಕರವು ಮೊದಲು ಏರಿಸಿದ್ದ ದರಕ್ಕಿಂತ ಬಹಳಷ್ಟು ಕಡಿಮೆಯಾಗಿತ್ತು. ಇದನ್ನು ಸರಕಾರ ಒಪ್ಪಿ ಜಾರಿ ಮಾಡಿತು. ಈ ಪ್ರಕರಣದ ನಂತರ ಭೂಲಾಭಾಯಿ ಸಾರ್ವಜನಿಕ ಕ್ಷೇತ್ರದಲ್ಲಿ ಹೆಸರು ಪಡೆದರು.

೧೯೩೦ರಲ್ಲಿ ಅವರು ಕಾಂಗ್ರೆಸ್ ಸೇರಿದರು. ಸ್ವದೇಶಿ ಸಭಾ ಎಂಬ ಸಂಸ್ಥೆಯನ್ನು ಸ್ಥಾಪಿಸಿ ಇದರ ಮೂಲಕ ಪರದೇಶಿ ವಸ್ತ್ರಗಳ ಬಹಿಷ್ಕಾರದ ಕೆಲಸ ತೀವ್ರವಾಗಿ ಪ್ರಾರಂಭಿಸಿದರು. ಆಗ ಮುಂಬಯಿಯಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿದ್ದ ಜವಳಿ ಉದ್ಯಮವನ್ನು ಗುರಿಯಾಗಿಟ್ಟುಕೊಂಡ ಅವರು, ಸುಮಾರು ೮೦ ಜವಳಿ ಕೈಗಾರಿಕೆಗಳ ಮನವೊಲಿಸಿ, ಪರದೇಶಿ ಕಚ್ಚಾ ವಸ್ತುಗಳನ್ನು ತಮ್ಮ ಕಾರಖಾನೆಗಳಲ್ಲಿ ಉಪಯೋಗಿಸದಂತೆ ತಡೆಹಿಡಿದರು. ಇದರ ಫಲವಾಗಿ ಸರಕಾರ ಸ್ವದೇಶಿ ಸಭಾವನ್ನು ಕಾನೂನುಬಾಹಿರ ಎಂದು ಘೋಷಿಸಿ, ಭೂಲಾಭಾಯಿಯವರನ್ನು ಜೈಲಿಗೆ ಅಟ್ಟಿತು.

೧೯೩೪-೩೫ರಲ್ಲಿ ಕಾಂಗ್ರೆಸ್ಸಿನ ಮಹತ್ವದ ಕಾರ್ಯಕಾರೀ ಸಮಿತಿಯ ಸದಸ್ಯರಾಗಿ ಭೂಲಾಭಾಯಿಯವರನ್ನು ಸರದಾರ್ ಪಟೇಲರ ಶಿಫಾರಸಿನ ಮೇಲೆ ಗಾಂಧಿ ನೇಮಿಸಿದರು. ಮುಂದೆ ನಡೆದ ಚುನಾವಣೆಯಲ್ಲಿ ಅವರು ಗುಜರಾತಿನಿಂದ ಬ್ರಿಟಿಷ್ ಸರಕಾರದ ಕೇಂದ್ರ ಮಂಡಳಿಗೆ ಆಯ್ಕೆಯಾದರು. ಈ ಎಲ್ಲ ರಂಗಗಳಲ್ಲೂ ಅವರು ತಮ್ಮ ಕುಶಾಗ್ರ ಬುದ್ಧಿಮತೆಯನ್ನು ಪ್ರದರ್ಶಿಸಿ , ಸಾರ್ವಜನಿಕರ, ರಾಜಕೀಯ ಧುರೀಣರ ಕಣ್ಣಿಗೆ ಬಿದ್ದರು. ಅವರು ಮೊದಲ ಬಾರಿಗೆ ಕೇಂದ್ರ ಮಂಡಳಿಯ ಕೆಲಸ ಶುರುಮಾಡಿದಾಗ ಅದನ್ನು ನೋಡಲೆಂದೇ ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷರುಗಳಿಬ್ಬರು ದೂರದಿಂದ ದಿಲ್ಲಿಗೆ ಬಂದಿದ್ದರಂತೆ.

ಕೇಂದ್ರ ಮಂಡಳಿಯ ಸುಮಾರು ಹತ್ತು ವರ್ಷಗಳ ಸದಸ್ಯತ್ವದಲ್ಲಿ ಅವರು Indian Companies Act 1936, Insurance Bill 1938 ಸೇರಿದಂತೆ ಅನೇಕ ಅತ್ಯಂತ ಮಹತ್ವದ ಮಸೂದೆಗಳ ವಿಷಯದಲ್ಲಿ ತಮ್ಮ ಕಾನೂನಿನ ವಿದ್ವತ್ತನ್ನು ಉಪಯೋಗಿಸಿ ಬಹು ದೊಡ್ಡ ಕೊಡುಗೆಯನ್ನು ನೀಡಿದರು. ೧೯೩೮ರಲ್ಲಿ ಅವರು ಮುಂಬಯಿ ಪ್ರದೇಶ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾದರು.

೧೯೩೯ರಲ್ಲಿ ಎರಡನೆಯ ಮಹಾಯುದ್ಧ ಶುರುವಾಯಿತು. ಈ ಸಂದರ್ಭದಲ್ಲಿ ಯುದ್ಧದ ಬಗ್ಗೆ ಹಾಗೂ ಯುದ್ಧಾನಂತರ ಭಾರತದ ಸ್ವಾತಂತ್ರ್ಯದ ಬಗ್ಗೆ ಬ್ರಿಟಿಶ್ ಸರಕಾರ ಮತ್ತು ಕಾಂಗ್ರೆಸ್ ನಡುವಿನ ಭಿನ್ನಾಭಿಪ್ರಾಯ ತೀವ್ರವಾಗಿ ಕಾಂಗ್ರೆಸ್ ೧೯೪೨ರಲ್ಲಿ "ಭಾರತ ಬಿಟ್ಟು ತೊಲಗಿ" ಚಳುವಳಿಯನ್ನು ಪ್ರಾರಂಭಿಸಿತು. ಇದು ತೀವ್ರವಾಗಿ ದೇಶದೆಲ್ಲೆಡೆ ಹಬ್ಬಿತು. ೬೦ ಸಾವಿರಕ್ಕೂ ಹೆಚ್ಚು ಜನರ ಬಂಧನವಾಯಿತು.

ಈಗಾಗಲೇ ಮುಸ್ಲಿಮ್ ಲೀಗ್ ಪ್ರತ್ಯೇಕ ಮುಸ್ಲಿಮ್ ರಾಷ್ಟ್ರದ ಬೇಡಿಕೆಯನ್ನು ಇಟ್ಟಾಗಿತ್ತು. ಕಾಂಗ್ರೆಸ್ಸಿನ "ಭಾರತ ಬಿಟ್ಟು ತೊಲಗಿ" ಚಳುವಳಿಗೆ ಪ್ರತಿಕ್ರಿಯೆಯಾಗಿ ಮುಸ್ಲಿಮ್ ಲೀಗ್ " ವಿಭಜಿಸಿ ತೊಲಗಿ" ಎಂಬ ತಮ್ಮದೇ ಹೋರಾಟವನ್ನು ಪ್ರಾರಂಭಿಸಿತು. ಮುಸ್ಲಿಮ್ ಸಮಸ್ಯೆಯನ್ನು ಬಗೆಹರಿಸದ ಹೊರತು ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕುವುದು ಸುಲಭವಲ್ಲ ಎಂದು ಮನಗಂಡಿದ್ದ ಗಾಂಧಿ, ಪೂರ್ಣ ಸ್ವಾತಂತ್ರ್ಯದವರೆಗಿನ ವಿವಿಧ ಹಂತಗಳಲ್ಲಿ ಕಾಂಗ್ರೆಸ್ ಹಾಗೂ ಮುಸ್ಲಿಮ್ ಲೀಗ್ ಒಟ್ಟು ಸೇರಿ ಕೆಲಸ ಮಾಡುವ ಬಗ್ಗೆ ರಾಜಾಜಿಯವರ ಮೂಲಕ ಮುಸ್ಲಿಂ ಲೀಗ್ ನಾಯಕರುಗಳೊಂದಿಗೆ ಮಾತುಕತೆ ಮಾಡುತ್ತಿದ್ದರು. ಆದರೆ ಅದು ಬಗೆ ಹರಿಯಲಿಲ್ಲ. ಮುಂದೆ ಸ್ವತಃ ಗಾಂಧಿ, ಜಿನ್ನಾ ನೇರವಾಗಿ ಈ ಬಗೆ ಮಾತುಕತೆಯಾಡಿದರೂ ಅದೂ ವಿಫಲವಾಯಿತು.

ಈಗ ಗಾಂಧಿ ಪೂರ್ಣ ಸ್ವಾತಂತ್ರ್ಯ ಬರುವ ಮೊದಲು ರಚನೆ ಮಾಡಬಹುದಾಗಿದ್ದ ತಾತ್ಕಾಲಿಕ ರಾಷ್ಟ್ರೀಯ ಸರಕಾರದಲ್ಲಿ ಲೀಗಿನ ಸಹಕಾರ ಖಾತ್ರಿ ಮಾಡಿಕೊಳ್ಳುವುದಕ್ಕೆ, ಲೀಗಿನೊಂದಿಗೆ ಚರ್ಚಿಸಿ ಒಪ್ಪಂದ ಮಾಡಿಕೊಳ್ಳುವುದಕ್ಕೆ ಭೂಲಾಭಾಯಿ ದೇಸಾಯಿಯವರನ್ನು ಕೇಳಿಕೊಂಡರು. ಚಳುವಳಿಯ ಪರಿಣಾಮವಾಗಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಬಹುತೇಕ ಸದಸ್ಯರೆಲ್ಲಾ ಜೈಲಿನಲ್ಲಿದ್ದರು. ಗಾಂಧಿಯವರ ಕೋರಿಕೆಯ ಮೇರೆಗೆ, ಭೂಲಾಭಾಯಿ ಮುಸ್ಲಿಮ್ ಲೀಗ್ ನ ಹಿರಿಯ ನಾಯಕ ಲಿಯಾಕತ್ ಅಲಿ ಯೊಂದಿಗೆ ಮಾತುಕತೆ ಆರಂಭಿಸಿ, ಅವರೊಂದಿಗೆ ಒಂದು ಕರಡು ಒಪ್ಪಂದಕ್ಕೆ ಸಹಿ ಹಾಕಿಸುವುದರಲ್ಲಿ ಯಶಸ್ವಿಯಾದರು. ಈ ಒಪ್ಪಂದದ ಮುಖ್ಯ ಅಂಶಗಳು, ಅದನ್ನು ಬರೆಯಬೇಕಾದ ವಿಧಾನ ಈ ಪ್ರತಿಯೊಂದು ಹಂತದಲ್ಲಿಯೂ ಭೂಲಾಭಾಯಿ ಗಾಂಧಿಯವರೊಡನೆ ಚರ್ಚಿಸಿ ಅವರ ಅಭಿಪ್ರಾಯದಂತೆ ಸೂಕ್ತ ಬದಲಾವಣೆ ಮಾಡಿಕೊಂಡಿದ್ದರು. ಈ ಒಪ್ಪಂದ ರಹಸ್ಯವಾಗಿದ್ದು, ಬಹಿರಂಗವಾಗಿರಲಿಲ್ಲ. ಸೂಕ್ತ ಸಮಯದಲ್ಲಿ ಇದನ್ನು ಸಾರ್ವಜನಿಕವಾಗಿ ಘೋಷಿಸುವ ಯೋಜನೆಯಿತ್ತು.

ಈ ಕರಡು ಒಪ್ಪಂದ ಪತ್ರಿಕೆಯೊಂದರಲ್ಲಿ ಆಕಸ್ಮಾತ್ತಾಗಿ ಬಹಿರಂಗವಾಗಿಬಿಟ್ಟಿತು. ತಕ್ಷಣವೇ ಮುಸ್ಲಿಂ ಲೀಗಿನ ಲಿಯಾಕತ್ ಅಲಿ ಈ ಒಪ್ಪಂದ ತನ್ನ ವೈಯಕ್ತಿಕ ನೆಲೆಯಲ್ಲಿ ಮಾಡಿದ್ದೆಂದೂ, ಜಿನ್ನಾರವರಿಗೆ ಈ ವಿಷಯ ತಿಳಿದಿಲ್ಲವೆಂದು ಹೇಳಿ ಕಾಂಗ್ರೆಸ್ಸನ್ನು ಪೇಚಿಗೆ ಸಿಲುಕಿಸಿದರು. ಆ ಸಮಯದಲ್ಲಿ ಸಾರ್ವಜನಿಕವಾಗಿ ಪತ್ರಿಕೆಗಳಲ್ಲಿ ನಡೆದ ತೀವ್ರ ವಾದ ವಿವಾದಗಳಲ್ಲಿ ಭೂಲಾಭಾಯಿ ತಮ್ಮ ನಿಲುವನ್ನೂ, ಹೇಗೆ ಜಿನ್ನಾರಿಗೆ ಇದರ ಅರಿವಿತ್ತು ಎಂದು ಸಮರ್ಥನೆ ಮಾಡಿಕೊಂಡರೂ ಈ ವಿವಾದ ನಿಲ್ಲಲಿಲ್ಲ. ಹಾಗೂ ಒಪ್ಪಂದ ಅಲ್ಲಿಯೇ ಮುಗಿದು ಹೋಯಿತು. ಈ ಮಧ್ಯೆ ಕಾಂಗ್ರೆಸ್ಸಿನ ಕಾರ್ಯಕಾರೀ ಸದಸ್ಯರುಗಳುಗಳಲ್ಲಿ (ಅವರೆಲ್ಲಾ ಆ ಸಮಯದಲ್ಲಿ ಜೈಲಿನಲ್ಲಿದ್ದರಲ್ಲ), ಇದು ಭೂಲಾಭಾಯಿಯವರು ಕಾರ್ಯಕಾರೀ ಸಮಿತಿಯನ್ನು ಕಡೆಗಣಿಸಿ, ವೈಸರಾಯ್ ಆಗ ನೇಮಕ ಮಾಡಲು ಯೋಜಿಸಿದ್ದ Executive Council ನ ಸದಸ್ಯರಾಗಲು ಈ ಒಪ್ಪಂದದ ಮೂಲಕ ಹುನಾರು ನಡೆಸಿದರು ಎಂಬ ಗುಸುಗುಸು ಶುರುವಾಗಿ ಪ್ರಸಿದ್ಧಿ ಪಡೆಯಿತು. ಗಾಂಧಿ ಭೂಲಾಭಾಯಿಯವರ ಚಾರಿತ್ರ್ಯದ ಬಗ್ಗೆ, ಅವರ ದೇಶಭಕ್ತಿಯ ಬಗ್ಗೆ ಇತ್ಯಾದಿ ಸಾರ್ವಜನಿಕ ಹೇಳಿಕೆಗಳನ್ನು ಕೊಟ್ಟರೂ, ಭೂಲಾಭಾಯಿ ಈ ಒಪ್ಪಂದದ ಕಾಲದಲ್ಲಿ ತಮ್ಮ ಸೂಚನೆಯ ಪ್ರಕಾರವೇ ನಡೆದುಕೊಂಡಿದ್ದರು ಎಂಬುದನ್ನು ಸ್ಪಷ್ಟ ಮಾಡಲೇ ಇಲ್ಲ. ಈಗ ಭೂಲಾಭಾಯಿ ಏಕಾಂಗಿಯಾದರು. ಕಾಂಗ್ರೆಸ್ಸಿನಲ್ಲಿ ಅವರ ತ್ವರಿತ ಬೆಳವಣಿಗೆ ಹಾಗೂ ಪ್ರಸಿದ್ಧಿಯಿಂದ ಅಸೂಯೆ ಪಟ್ಟವರು ಅನೇಕರಿದ್ದರು. ಈ ಎಲ್ಲಾ ಕಾರಣಗಳಿಂದ ಕಾಂಗ್ರೆಸ್ ಪಕ್ಷದಲ್ಲಿ ಭೂಲಾಭಾಯಿಯವರ ಭವಿಷ್ಯ ಹಠಾತ್ತನೆ ಕೊನೆಗೊಂಡಿತು. ಭೂಲಾಭಾಯಿಯವರಿಗೆ ಇದರಿಂದ ಅತ್ಯಂತ ಬೇಸರವಾಯಿತು. ಈಗಾಗಲೇ ಕೆಡುತ್ತಿದ್ದ ಅವರ ಆರೋಗ್ಯ ಇನ್ನಷ್ಟು ಹದಗೆಟ್ಟಿತು.

ಈ ಮಧ್ಯೆ ಸುಭಾಶ್ ಚಂದ್ರ ಬೋಸರ ಆಜಾದ್ ಹಿಂದ್ ಸೇನೆಯ ಕೆಲವರ ವಿರುದ್ಧ ದೇಶದ್ರೋಹದ ಆರೋಪ ಹೊರಿಸಿ ಬ್ರಿಟಿಷ್ ಸರಕಾರ ಕೋರ್ಟ್ ಮಾರ್ಶಲ್ ಪ್ರಾರಂಭಿಸಿತು. ಈ ಸೇನಾಧಿಕಾರಿಗಳ ಪರವಾಗಿ ವಾದಮಾಡಲು ಕಾಂಗ್ರೆಸ್ ಮತ್ತೆ ಭೂಲಾಭಾಯಿಯವರ ಮೊರೆ ಹೊಕ್ಕಿತು. ಇಷ್ಟೆಲ್ಲಾ ಅವಮಾನವಾಗಿದ್ದರೂ, ಭೂಲಾಭಾಯಿ ಒಪ್ಪಿಕೊಂಡು, ತೀವ್ರ ಅನಾರೋಗ್ಯದ ನಡುವೆಯೂ ಕೋರ್ಟಿನಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ವಾದಿಸಿ, ಈ ಸೈನ್ಯಾಧಿಕಾರಿಗಳನ್ನು ಉಳಿಸಿದರು.

ಅವರ ಆರೋಗ್ಯ ಕೆಡುತ್ತಲೇ ಹೋಯಿತು. ಈ ಸಮಯದಲ್ಲಿ ಅವರನ್ನು ನೋಡಲು ಅವರ ಮನೆಗೆ ಗಾಂಧಿ ಎರಡು ಬಾರಿ ಬಂದು ಹೋದರು. ಲಿಯಾಕತ್ ಒಪ್ಪಂದದ ಬಗ್ಗೆ  ಗಾಂಧಿಯವರಿಂದ ಸಮಝಾಯಿಶಿ ಬಯಸಿದ್ದ ಭೂಲಾಭಾಯಿಯವರ ಆಸೆ ಈಡೇರಲೇ ಇಲ್ಲ. ಯಾಕೆಂದರೆ ಈ ಎರಡೂ ಬಾರಿ ಗಾಂಧಿಯವರು ಬಂದ ದಿನ ಅವರ ಮೌನ ವ್ರತದ ದಿನವಾಗಿತ್ತು!!.

ಈ ಒಪ್ಪಂದದ ವಿಷಯದಲ್ಲಿ ಗಾಂಧಿ ತಮ್ಮ ಬೆನ್ನಹಿಂದೆ ನಿಂತು ತಮ್ಮನ್ನು ಬೆಂಬಲಿಸಲಿಲ್ಲ ಎಂಬ ಕೊರಗಿಟ್ಟುಕೊಂಡೇ ಭೂಲಾಭಾಯಿ ನಿಧನರಾದರು. ಅವರ ನಿಧನದ ನಂತರ ಅವರ ಬಗ್ಗೆ ಅನೇಕ ಕಾಂಗ್ರೆಸ್ ನಾಯಕರುಗಳು ವೈಯಕ್ತಿಕ ನೆಲೆಯಲ್ಲಿ ಗುಣಗಾನ ಮಾಡಿ ಸಂತಾಪ ಸೂಚಿಸಿದರೂ, ಕಾಂಗ್ರೆಸ್ ಪಕ್ಷದಲ್ಲಿ ಆಗಿದ್ದ ಅವರ ತೇಜೋವಧೆಯ ತಪ್ಪೊಪ್ಪಿಗೆ ಆಗಲೇ ಇಲ್ಲ.

ಅವರ ಮರಣದ ನಂತರ ಅವರ ಹೆಸರಿನಲ್ಲಿ ಭೂಲಾಭಾಯಿ ಸಭಾಗೃಹವನ್ನು ಕಟ್ಟಲಾಯಿತು. ಮಹಾಲಕ್ಷ್ಮಿ ದೇವಸ್ಥಾನದ ಹತ್ತಿರದ ರಸ್ತೆಯೊಂದಕ್ಕೆ ಭೂಲಾಭಾಯಿ ದೇಸಾಯ್ ರಸ್ತೆ ಎಂದು ಹೆಸರಿಡಲಾಗಿದೆ.

# ಕಾಲ



✍ ಉಮಾ ರಾವ್

ಅವನು ಅರಮನೆಯ ಕೆಲಸಗಾರನಾಗಿದ್ದ. ಅವನ ನೆನಪು ಸರಿಯುವವರೆಗೂ, ಅವನ ದೇಹ ಹದಿನೇಳು ವರ್ಷದ ತುಂಬು ಹರೆಯದಿಂದ ನಿಧಾನವಾಗಿ ಜಾರಿ, ಪೇಟದೊಳಗಿನ ತಲೆ ಬೋಳಾಗಿ, ಮೈಸುಕ್ಕುಗಟ್ಟಿ ತೊಡಗಿದ ಅಂದಿನ ದಿನದವರೆಗೂ ಅರಮನೆಯ ಕಾವಲುಗಾರನಾಗಿದ್ದ. ಕಾವಲುಗಾರನಾಗಿ, ಕಾವಲುಗಾರನ ದಿರಿಸು ಧರಿಸಿ, ಕೈಯಲ್ಲಿ, ಭಲ್ಲೆ ಹಿಡಿದು ಮುಂದೆ ಸಾಗುವವರಿಗೆಲ್ಲಾ ಸಲಾಮು ಹಾಕುತ್ತಾ, ಜೀವ ಮಾನವೆಲ್ಲಾ ಆರಮನೆಯ ಬಾಗಿಲಿನಲ್ಲಿ ನಿಂತು ಕಳೆದಿದ್ದ ಅವನ ಅಪ್ಪನಂತೆ, ಅಜ್ಜನಂತೆ, ಮುತ್ತಜ್ಜನಂತೆ. ಹಾಗೆಯೇ ಅರಮನೆಯ ಆಗುಹೋಗುಗಳಿಗೆ, ಸಂತಸ - ಸಂಭ್ರಮಗಳಿಗೆ, ಸಾವು ನೋವುಗಳಿಗೆ ಮೂಕ ಸಾಕ್ಷಿಯಾಗಿದ್ದ. ಅದರ ವ್ಯವಸ್ಥೆಯ ಚಟುವಟಿಕೆಗಳ ಅವಿಭಾಜ್ಯ ಅಂಗವಾಗಿ ಹೋಗಿದ್ದ.

ಅರಮನೆಯ ಪ್ರವೇಶ ದ್ವಾರದಲ್ಲಿ ನಿಂತು, ನಾಗರಿಕತೆ ನೂರಾರು ಗೊರಸುಗಳ ಸಪ್ಪಳದಿಂದ ಕಾರು ಟೈರುಗಳ ಕಡೆಗೆ ಸಾಗಿದ್ದನ್ನು ಕಂಡಿದ. ವಜ್ರ ವೈಢೂರ್ಯಗಳ ರಾಶಿಯಿಂದ ಸುತ್ತುವರಿಯಲ್ಪಟ್ಟು, ಸಾವಿರಾರು ಸಿಬ್ಬಂದಿಯ ಅಧಿಪತಿಯಾಗಿ, ಪ್ರಜೆಗಳಿಂದ ದೇವರ ಸಮಾನರೆಂದು ಪೂಜಿಸಲ್ಪಡುತ್ತಿದ್ದ ಮಹಾರಾಜರು, ವರ್ಷಗಳುರಿಳಿದಂತೆ, ಕೇವಲ ಹೆಸರಿಗೆ ಅರಸರಾಗಿ, ಯಾತ್ರಿಕರಿಗೆ ಪ್ರದರ್ಶನದ ವಸ್ತುವಾಗಿ, ಅದಕ್ಕೋಸ್ಕರ ಆನೆಯ ಮೇಲೆ ಸವಾರಿ ಮಾಡುವ, ತೋರಿಕೆಯ ದರ್ಬಾರು ನಡೆಸುವ ಸೂತ್ರದ ಗೊಂಬೆಯಾಗಿದ್ದನ್ನು ಕಂಡಿದ್ದ. ಉತ್ಸವಗಳಲ್ಲಿ ತಳಿರು-ತೋರಣಗಳಿಂದ ಕಳಕಳಿಸಿ ನೂರಾರು ಜನರ ಕಲವರದ ಬೀಡಾಗಿ, ಬಂಡವರೊಬ್ಬರೂ ಬರಿಗೈಯಲ್ಲಿ ಹಿಂದಿರುಗದ, ಸಂತುಷ್ಟಿಯ ಸಂತೃಪ್ತಿಯ ಅಗರವಾದ ಅರಮನೆ. ಕೇವಲ ಗೈಡುಗಳ ಜೊತೆ ಬಂದ ಗುಂಪುಗಳಿಗೆ ಅಳಿದ ವೈಭವದ ಕುರುಹು ಮಾತ್ರವಾದದ್ದನ್ನು ಕಂಡಿದ್ದ. ದೇಶಕ್ಕೆ ಸ್ವಾತಂತ್ರ್ಯ ಬಂದು ಪ್ರಜಾಪ್ರಭುತ್ವ ಕಾಲಿಟ್ಟಾಗಲೇ ಜನಗಳಿಗೆ ತಮ್ಮತನದ ಅರಿವು ಮೂಡಿ, 'ಇವರದೇನು ಹೆಚ್ಚುಗಾರಿಕೆ, ಮಹಾರಾಜರು ನಮ್ಮಂತೆಯೇ ಒಬ್ಬ ಮನುಷ್ಯರು' ಎಂಬ ಮಾತು ಮೆಲ್ಲನೆ ಓಣಿಗಳನ್ನು ತುಂಬಿದ್ದನ್ನು ಕೇಳಿದ್ದ.

ಹೀಗೆ ನಿಂತೇ ಸಾಗುವ ಬದುಕಿನಲ್ಲಿ ಮಧ್ಯೆ ಮಧ್ಯೆ ತನ್ನ ಮದುವೆ ಮೂರು ಹೆಣ್ಣು ಮಕ್ಕಳು, ಅವರ ಮದುವೆ, ಮೊಮ್ಮಕ್ಕಳು, ಹೆಂಡತಿಯ ಸಾವು, ಗುಬ್ಬಿ ವೀರಣ್ಣನ ನಾಟಕಗಳು.... ಈ ಘಟನೆಗಳಿಗೆ ಬಿಡುವು ಮಾಡಿಕೊಂಡಿದ್ದ.

ಹಾಗೆ ಕಳೆದ ಅನೇಕ ವರ್ಷಗಳಲ್ಲಿ ಅವನ ಸಂಬಳ ಅಷ್ಟು ಹೆಚ್ಚೇನೂ ಆಗಿರಲಿಲ್ಲ. ಹುದ್ದೆ ಏರಿರಲಿಲ್ಲ. ವರ್ಷಗಳ ಹಿಂದೆ ನೆಮ್ಮದಿಯಿಂದ ಸಾಗುತ್ತಿದ್ದ ಜೀವನ. ಈಗೀಗ ಹೊಟ್ಟೆಬಟ್ಟೆಗೂ ಸಾಕಾಗುತ್ತಿರಲಿಲ್ಲ. ತನ್ನ ಕೆಲಸದಂತೆಯೇ ತನ್ನ ಜೀವನ ಮಟ್ಟವನ್ನೂ ಕಾಲ ಬಂದಂತೆ ಅವನು ಸ್ವೀಕರಿಸಿದ್ದ. ಈ ವಿಷಯವಾಗಿ ಅವನು ಯಾವ ಪ್ರತಿಭಟನೆ, ಮುಷ್ಕರವನ್ನೂ ಮಾಡಿರಲಿಲ್ಲ. ಆ ಭಾವನೆಯೇ ಅವನ ಮನಸ್ಸಿನಲ್ಲಿ ಮೂಡಿರಲಿಲ್ಲ. ಅವನ ವ್ಯಕ್ತಿತ್ವದ ಮೇಲೆ ಪ್ರಭುತ್ವವನ್ನು ಸ್ಥಾಪಿಸಿದ ಒಂದೇ ಒಂದು ಭಾವನೆಯೆಂದರೆ ಅವನಿಗೆ ಒಡೆಯನ್ನು ಕಂಡರೆ ಇದ್ದ ಎಂದೂ ಏರುಪೇರಾಗದ ಭಕ್ತಿ. ವಿಧೇಯತೆ ನಿಯತ್ತು. ಇದೇ ಭಾವನೆ ಅವನ ದಂಗೆಯೇಳುವ ಸ್ವಭಾವವನ್ನು ಎಂದೋ ಹೊಸಕಿ ಹಾಕಿತ್ತು.

ರಾಜರ ರಾಜಧನ ರದ್ದಾಗಿ, ಪದವಿ ಹೋದ ದಿನದಿಂದ, ಅರಮನೆಯ ಸಿಬ್ಬಂದಿಗೆಲ್ಲಾ ಗೊತ್ತಾಗಿತ್ತು. ಇನ್ನು ಹೆಚ್ಚು ದಿನ ತಮ್ಮಂತಹವರ ಅವಶ್ಯಕತೆ ಇವರಿಗಿಲ್ಲ ಎಂದು ಅವನೂ ತನ್ನನ್ನು ಕೆಲಸದಿಂದ ತೆಗೆದು ಹಾಕುವ ದಿನದ ನಿರೀಕ್ಷೆಯಲ್ಲೇ ಇದ್ದ. ಆದರೆ ತನ್ನ ವೃತ್ತಿಯ ಕೊನೆಯ ದಿನ, ಕೈಯಲ್ಲಿ ಬಿದ್ದ ಹಣ ಎಣಿಸಿ, ಕೊನೆಯ ಬಾರಿ ಅಲ್ಲಿಂದ ಮನೆಗೆ ಹೊರಟಾಗ, ಹೊಟ್ಟೆ ಕಿವುಚಿದಂತಾಗಿ, ಕಂಗಾಲಾಗಿದ್ದ. ಏನೋ ಒಂದು ರೀತಿಯ ಅಸ್ಥಿರತೆ ಒಬ್ಬನೇ ನರಪ್ರಾಣಿ ಅಪರಿಚಿತ ದ್ವೀಪವೊಂದರಲ್ಲಿ ಸಿಕ್ಕಾಕಿಕೊಂಡ ಭಾವನೆ ಅವನಲ್ಲಿ ತುಂಬಿಹೋಗಿತ್ತು. ಅಂದು ಮನೆಗೆ ಹೋದ ಮೇಲೆ ಪರಿಸ್ಥಿತಿಗೆ ಹೊಂದಿಕೊಳ್ಳಲು ಹಲವಾರು ದಿನಗಳೇ ಬೇಕಾಯಿತು. ದಿನವೆಲ್ಲಾ ಮಾತಿಲ್ಲದೆ ಬೀದಿ ಬಾಗಿಲಲ್ಲಿ ಬೀಡಿ ಸೇದುತ್ತಾ ಕುಳಿತು ಎಷ್ಟೋ ದಿನ ಕೆಲಸ ಹುಡುಕಲು ಹೊರಟ. ಏನಾದರೂ ಹೊಸ ಬದುಕು ಆರಂಭ ಮಾಡಲೇಬೇಕಿತ್ತು. ಅಕ್ಕಪಕ್ಕದವರನ್ನೆಲ್ಲಾ ಪದೇ ಪದೇ ವಿಚಾರಿಸಿದಾಗ ತಿಳಿದು ಬಂದಿತ್ತು. ಹತ್ತಿರವೇ ಇರುವ "ಶ್ರೀ ಮಹದೇಶ್ವರ ಪ್ರಾವಿಜನ್

ಸ್ಟೋರ್ಸ್"ನಲ್ಲಿ ಕೆಲಸಕ್ಕೆ ಒಬ್ಬ ಬೇಕಾಗಿದ್ದಾನೆಂದು. ಆ ಅಂಗಡಿಯ ಮಾಲೀಕ ದೊಡ್ಡ ಹೊಟ್ಟೆಯ ಗೊಂಚಲು ಮೀಸೆಯ ಶೆಟ್ಟಿ, ಆತ ಶೆಟ್ಟಿಯ ಎದುರಿಗೆ ನಿಂತ. ವಿಧೇಯತೆಯಿಂದ ಕೈ ಮುಗಿದ.

"ಇಲ್ಲಿ ಕೆಲಸ ಖಾಲಿ ಇದೇಂತ ಯಾರೋ ಏಳಿದ್ರು ಸ್ವಾಮಿ. .."

ಶೆಟ್ಟಿ ಇವನನ್ನು ಮೇಲಿನಿಂದ ಕೆಳಗಿನವರೆಗೂ ನೋಡಿ,

"ಅದಕ್ಕೋಸ್ಕರ ಬಂದ್ಯಾ .. . ."

"ಏನ್ಮಾಡ್ಲಿ ಸೋಮಿ, ಈಗ ನಮ್ಮಂತೋರ್ನೆಲ್ಲಾ ತೆಗ್ದ ಹಾಕಿದ್ರುಲ್ಲಾ... ಅದ್ಕೇ.... ಕೆಲಸ ಹುಡುಕ್ತಾ ಇದೀನಿ."

"ಓ.... ಶುದ್ಧ ಅನ್ಯಾಯ, ಶುದ್ಧ ಅನ್ಯಾಯ... ನಮ್ಮ ಸರ್ಕಾರದೋರು ಮಾಡೊದೆಲ್ಲಾ ಇಂಥಾದ್ದೇ ನೋಡು... ರಾಜರಿಗೇನು ಎಲ್ಲಾದ್ರೂ ಹಾಯಾಗಿರ್ತಾರೆ.... ನಿಮ್ಮಂಥೋರಿಗೆ ತಾನೇ ಕಷ್ಟ.... ಬಡವರಿಗೆ ಹೇಗೆ ಹೊಟ್ಟೇಮೇಲೆ ಹೊಡೆಯೋದಾ.....ಜೀವಮಾನವೆಲ್ಲಾ ನಿಯತ್ತಿನಿಂದ ದುಡಿದಿದ್ದೀ, ನಿಂಗೇನಾದ್ರೂ ಮಾಡ್ಬಾರದಾ... ಮುಖ್ಯವಾಗಿ ಕಾಲ ಕೆಟ್ಟು ಹೋಯ್ತು....ತ್ಸು ತ್ಸು ತ್ಸು ಹೋಗ್ಲಿ. . . ಓದೋಕೆ ಬರೆಯೋಕೆ ಬರುತ್ತಾ?"

"ಇಲ್ಲ ಸೋಮಿ...."

"ಇಷ್ಟು ವಯಸ್ಸಾಗಿದೆ ಓದೋಕೆ ಬರೆಯೋಕೆ ಕೂಡ ಬರೋಲ್ಲ ಅಂತೀಯಾ, ಅಂಗಡಿ ಕೆಲ್ಸ ಏನು ಮಾಡ್ತೀಯಾ?"

"ಮಾಡ್ತೀನಿ ಸೋಮಿ.... ಏನೋ ಬಡವ... ಕೆಲ್ಸ ಕೊಟ್ರೆ ನಿಮ್ಹೆಸರು ಏಳ್ಕೊಂಡು ಗಂಜಿ ಕುಡೀತೀನಿ. . ."

"ನಾನು ಕೊಡೋ ಸಂಬಳ ನಿಂಗೆ ಗೊತ್ತೇ ಇದೆಯಲ್ಲ, ಆಮೇಲೆ ತಕರಾರು ಮಾಡಬಾರದು".

ಒಂದು ಸಲ ಸುತ್ತ ಮುತ್ತಲೂ ಕಣ್ಣು ಹಾಯಿಸಿ ಯಾರಿಗೂ ಕೇಳಿಸದಂತೆ ಸಂಬಳವನ್ನು ಅವನ ಕಿವಿಯಲ್ಲಿ ಪಿಸುಗುಟ್ಟಿದ ಶೆಟ್ಟಿ.

"ಆಯ್ತು ಸೋಮಿ . . ."

"ನಿನ್ನ ಹೆಸರು?"

"ಅಂ . . .?"

"ರಾಜಪ್ಪ"

"ರಾಜಪ್ಪ... ರಾಜಪ್ಪ. ಆಯ್ತು ಬಿಡಿ, ನಾಳೆ ಬೆಳಿಗ್ಗೆ ಬಾ ನೋಡೋಣ,"

ರಾಜಪ್ಪ ಮನಸ್ಸಿನಲ್ಲೇ ದೇವರಿಗೆ ಕೈ ಮುಗಿದು ಮನೆಗೆ ಹೊರಟ.

ಶೆಟ್ಟಿಗೆ ಸಂತೋಷವಾಯಿತು. "ನೋಡೋಕೆ ಗುಗ್ಗು ಹಾಗಿದಾನೆ. ವಯಸ್ಸಾಗಿದೆ, ಅರಮನೇಲಿ ಇಷ್ಟು ವರ್ಷ ಕೆಲಸ ಮಾಡಿದ ಮೇಲೆ ನಿಯತ್ತಿನ ಮನುಷ್ಯ ಇರಬೇಕು. ತನ್ನ ಅದೃಷ್ಟ. ಇಷ್ಟು ಕಡಿಮೆ ಸಂಬಳಕ್ಕೆ ಈಗಿನ ಕಾಲದಲ್ಲಿ ಯಾರಾದರೂ ಸಿಕ್ಕೋದುಂಟೆ..." ಹಿಗ್ಗಿ ಹೋದ ಶೆಟ್ಟಿ.

ಮಾರನೆಯ ದಿನ ಬೆಳಗ್ಗೆ ಸಾದಾ ಬಟ್ಟೆಯಲ್ಲಿ ಕೆಲಸಕ್ಕೆ ಹೊರಟ ರಾಜಪ್ಪನಿಗೆ ಏನೋ ಪಿಚ್ಚೆನಿಸಿತು. ಪೇಟವಿಲ್ಲದ ತನ್ನ ತಲೆ ಹೊರಗೆ ಹಾಕಿಯೇ ಅಭ್ಯಾಸವಿರಲಿಲ್ಲ. ಅವನಿಗೆ ಅಂಗಡಿಗೆ ಹೋದಾಗ ಶೆಟ್ಟಿ ಇವನು ಮಾಡಬೇಕಾದ ಕೆಲಸಗಳನ್ನೆಲ್ಲಾ ವಿವರಿಸಿದ. ಗಿರಾಕಿಗಳು ಕೇಳಿದ ಸಾಮಾನುಗಳನ್ನು ಅಳೆದು, ಕಟ್ಟಿಕೊಡುವ ಕೆಲಸ. ಲೆಕ್ಕ ಹಾಕಿ ದುಡ್ಡು ತೆಗೆದುಕೊಳ್ಳುವವ ಶೆಟ್ಟಿಯೇ. ಅಂಗಡಿಯ ತುಂಬಾ ತನ್ನನ್ನು ಸುತ್ತುವರೆದಿದ್ದ ಸಾಮಾನುಗಳನ್ನು ಕಣ್ಣರಳಿಸಿ ನೋಡಿದಾಗ ರಾಜಪ್ಪನಿಗೆ ಒಂದು ಕ್ಷಣ ನೆಲದ ಮೇಲೆ ಬಿಟ್ಟ ಮೀನಿನಂತಾಯಿತು ಸ್ಥಿತಿ. ಇವನಿಗೆ ಪರಿಚಯವಿದ್ದ ದಿನ ನಿತ್ಯದ ಬಳಕೆಯ ಧಾನ್ಯಗಳ ಜೊತೆಗೆ ಬಣ್ಣಬಣ್ಣದ ಪೇಪರಿನಲ್ಲಿ ಸುತ್ತಿದ್ದ ಏನೇನೋ ಸಾಮಾನುಗಳು. ಪ್ಲಾಸ್ಟಿಕ್ ಡಬ್ಬಗಳು, ಸಲಕರಣೆಗಳು, ಕಣ್ಸೆಳೆಯುವ ಹೊದಿಕೆಯುಳ್ಳ ಎಲ್ಲಾ ರೀತಿಯ ವಸ್ತುಗಳಿಂದ ತುಂಬಿ ಹೋಗಿತ್ತು ಅಂಗಡಿ. ಮಾರುಕಟ್ಟೆಯನ್ನು ವೇಗವಾಗಿ ದಾಳಿ ಮಾಡಿದ್ದ ನೂರಾರು ಹೊಸ ಸಾಮಾನುಗಳ ಪರಿಚಯವೇ ಅವನಿಗಿರಲಿಲ್ಲ. ಗಿರಾಕಿಗಳು ಬಂದು ಒಂದು ಡಬ್ಬ ಡಿಟರ್ಜೆಂಟ್ ಎಂತಲೋ ಒಂದು ಜಾರ್ ಕೋಲ್ಡ್ ಕ್ರೀಮ್ ಎಂತಲೋ ಕೇಳಿದರೆ ಏನೆಂದು ಊಹಿಸಲೂ ಸಾಧ್ಯವಾಗುತ್ತಿರಲಿಲ್ಲ ಅವನಿಗೆ. ಇನ್ನು ಅಕ್ಕಿ, ಬೇಳೆಯನ್ನು ಅಳೆಯಲೂ ತುಂಬಾ ವೇಳೆ ಹಿಡಿಯುತ್ತಿತ್ತು. ಗ್ರಾಂ ಲೆಕ್ಕ. ಅವುಗಳನ್ನು ಜೋಡಿಸುವುದೇ ಒಂದು ದೊಡ್ಡ ತಲೆನೋವು.

ಮುಂದಿನ ಸಂಚಿಕೆಯಲ್ಲಿ ಮುಂದುವರೆಯುವುದು....

# ಒಂದು ನಾಟಕದ ಪ್ರಹಸನ



✍ **ಶಶಿಕಾಂತ್ ಜೋಶಿ**

ಮೈಸೂರು ಅಸೋಸಿಯೇಷನ್ ನಮಗೆಲ್ಲರಿಗೂ ಎರಡನೇ ಮನೆ ಇದ್ದ ಹಾಗೆ ಅಂದರೆ ತಪ್ಪಾಗಲಾರದು. ಪ್ರತಿ ಮಂಗಳವಾರ ಗಣೇಶನ ಪೂಜೆಯಲ್ಲಿ ಭಾಗವಹಿಸುವುದು ಅಥವಾ ಹಬ್ಬ ಹರಿದಿನಗಳಲ್ಲಿ ಎಲ್ಲರೂ ಕೂಡಿ ನಲಿದಾಡುವುದೇ ಒಂದು ಮೋಜು. ಅದರಲ್ಲೂ ಮಂಜುನಾಥದ್ವಯರು ಇದ್ದರಂತೂ ಮೋಜಿಗೆ ಒಂದು ಕಳಸ ಇದ್ದಂತೆ. ಅವರಿಗೂ ಸಹ ಅಸೋಸಿಯೇಷನ್ ನಲ್ಲಿ ಬಹಳಷ್ಟು ಜನ ಬಂದರೆ ಅವರ ಕಣ್ಣಲ್ಲಿ ಹೊಸ ಹೊಳಪು. ಡಾ. ಮಂಜುನಾಥ್ ಅವರು ತಮ್ಮದೇ ಆದ ವೇಷ ಭೂಷಣಗಳಲ್ಲಿ ಹಾಡುತ್ತಾ ಕುಣಿಯುತ್ತಾ ಅಡ್ಡಾಡುತ್ತಾ ಇರ್ತಾರೆ. ಆದರೆ ಮಂಜುನಾಥಯ್ಯ ಅವರು ಎಲ್ಲರನ್ನೂ ಮಾತನಾಡಿಸುತ್ತಾ ಉಭಯ ಕುಶಲೋಪರಿಗಳನ್ನು ವಿನಿಮಯ ಮಾಡ್ತಾ ಇರ್ತಾರೆ.

ಕಳೆದ ಎರಡು ವರ್ಷಗಳಿಂದ ಕೋವಿಡ್ ಕೀಟೆಯಿಂದ ಹೆಚ್ಚು ಕಡಿಮೆ ಹೊರಗೆ ಬಂದಾಗ ಎಲ್ಲರೂ ನಿಟ್ಟುಸಿರು ಬಿಟ್ಟರು. ಇದೇ ಸಮಯದಲ್ಲಿ BSKB ಯಲ್ಲಿ ಹೊಸದಾಗಿ ನಿರ್ಮಾಣವಾದ ಗೋಕುಲ ನಿವಾಸದಲ್ಲಿ ಶ್ರೀಕೃಷ್ಣನ ಪ್ರತಿಷ್ಠಾಪನಾ ಅಂಗವಾಗಿ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಂಡು ನಮ್ಮ ಅಸೋಸಿಯೇಷನ್ ಗೆ ಭಾಗವಹಿಸಲು ಕರೆಯಿತ್ತರು. ಮಂಜುನಾಥದ್ವಯರು ಅದನ್ನು ತುಂಬು ಹೃದಯದಿಂದ ಸ್ವಾಗತಿಸಿ, ನಮ್ಮೆಲ್ಲರನ್ನು ಕರೆದು ದೇವರ ನಾಟಕ 'ಸಾಕಾರ' ಮಾಡೋಣವಾ ಅಂತ ಕೇಳಿದರು. ಎಲ್ಲರೂ ಒಂದೇ ಸ್ವರದಲ್ಲಿ 'ಆಗಲಿ ಮಾಡೋಣ' ಅಂತ ಹೇಳಿದರು. ಆದರೆ ಮತ್ತೆ ಕೋವಿಡ್ ನ ಕರಿನೆರಳು ಸ್ವಲ್ಪಕಾಲ ಆವರಿಸಿದಾಗ, ಎಲ್ಲ ಕಾರ್ಯಕ್ರಮಗಳನ್ನು ಅನಿರ್ದಿಷ್ಟ ಕಾಲ ಮುಂದೂಡಲಾಯಿತು. ಎಲ್ಲರಿಗೂ ನಿರಾಸೆಯಾಯಿತು. ಆದರೆ ಆ ಕೋವಿಡ್ ನ ಕರಿನೆರಳು ಸರಿದಾಗ BSKB ಅವರು ಮತ್ತೆ ಕಾರ್ಯಕ್ರಮವನ್ನು ಫೆಬ್ರುವರಿ ಯಿಂದ ಮೇ ತಿಂಗಳಿನಲ್ಲಿ ಮಾಡುವುದಾಗಿ ತಿಳಿಸಿದರು. ಮಂಜುನಾಥದ್ವಯರು ಮತ್ತೆ ಎಲ್ಲರಿಗೂ ಕರೆದು ವಿಷಯವನ್ನು ಅರುಹಿದಾಗ ಎಲ್ಲರಿಗೂ ಆನಂದವಾಯಿತು. ಇದೇ ಸಮಯದಲ್ಲಿ ಕೋವಿಡ್ ನ ಹಾವಳಿಯಿಂದ ನಿಂತು ಹೋಗಿದ್ದ ಶ್ರೀರಂಗ ರಂಗೋತ್ಸವವನ್ನೂ ಮಾಡುವ ನಿರ್ಧಾರ ಅಸೋಸಿಯೇಷನ್ ನವರು ತೆಗೆದುಕೊಂಡು ಅದರಲ್ಲೂ ಸಹ ಇದೇ ನಾಟಕವನ್ನು ಸಾದರ ಪಡಿಸಬೇಕೆಂದು ಹೇಳಿದರು. ಎಲ್ಲರಿಗೂ ಮಹಾ ಆನಂದವಾಯಿತು. ಎರಡೂ ಕಡೆ ಈ ದೇವರ ನಾಟಕ 'ಸಾಕಾರ' ಮಾಡುವ ನಿರ್ಧಾರವಾಯಿತು. ಇನ್ನು ಪಾತ್ರ ವಿಂಗಡನೆ ಪ್ರಾರಂಭವಾಯಿತು. ಇದೇ ನಾಟಕ ಬಹು ವರ್ಷಗಳಿಂದ ಹಿಂದೆ ಬೆಂಗಳೂರು, ಮೈಸೂರು, ನಾಶಿಕ, ಸೋಲಾಪುರ ಇತ್ಯಾದಿ ಊರುಗಳಲ್ಲಿ ಮಾಡಿದ್ದರಿಂದ ಎಲ್ಲರಿಗೂ ತಮಗೆ ಯಾವ ಪಾತ್ರ ಬರುವ ಬಗ್ಗೆ ಕಲ್ಪನೆ ಇತ್ತು. ಆದರೆ ನಮ್ಮ ಕಾರ್ಯದರ್ಶಿ ಶ್ರೀ ಗಣಪತಿ ಶಂಕರಲಿಂಗ ಅವರು ತಮ್ಮ ವೈಯಕ್ತಿಕ ಕಾರಣಗಳಿಂದ ಈ ನಾಟಕದಲ್ಲಿ ಭಾಗವಹಿಸುವುದಿಲ್ಲ ಅಂತ ಹೇಳಿದಾಗ ಎಲ್ಲರಿಗೂ ನಿರಾಸೆಯಾಯಿತು. ಹಾಗೆಯೇ ಶ್ರೀ ದಿನೇಶ್ ಅವರು ಸಹ ಕೆಲದಿನ ಭಾಗವಹಿಸಿ, ಇನ್ನು ಮುಂದೆ ಬರಲಾಗುವುದಿಲ್ಲ ಎಂದು ಹೇಳಿದಾಗ ಮತ್ತೆ ಎಲ್ಲರಿಗೂ ಬೇಸರವಾಯಿತು. ಆದರೆ ಡಾ. ಹಾಗೂ ಮಂಜುನಾಥಯ್ಯ ಅವರು ಎದೆ ಗುಂದಲಿಲ್ಲ. ಬದಲಾಗಿ ಕೆಲ ಪ್ರಮುಖ ಪಾತ್ರಗಳ ಬದಲಾವಣೆ ಮಾಡಿದರಲ್ಲದೇ ಅದಕ್ಕೆ ಹೊಸ ಹೊಸ ಹಾಡುಗಳನ್ನು ಸಹ ಸೇರಿಸಿದರು. ಥೈಯಾ ಅವರಿಗೆ ಈ ವಯಸ್ಸಿನಲ್ಲಿ (83 ವರ್ಷ) ಸೂತ್ರಧಾರನ ಪಾತ್ರದ ಪಾಲು ಬಂದರೆ, ಶ್ರೀ ರಂಗನಾಥ ಅವರಿಗೆ ನೇಕಾರನ ಪಾತ್ರ (ರಾಮದಾಸ) ದೊರಕಿತು. ಶ್ರೀ ರಾಘವ ಅವರಿಗೆ ಧನಶೇಖರನ ಪಾತ್ರ. ಶ್ರೀಮತಿ ವೀಣಾ ಜೋಶಿ ಅವರಿಗೆ ಧನಶೇಖರನ ಪತ್ನಿಯ ಪಾತ್ರ ಅಂದರೆ ಲಕ್ಷ್ಮೀಯ ಪಾತ್ರ. ಶ್ರೀಮತಿ ಲಕ್ಷ್ಮೀ ಸೀತಾರಾಮ ಇವರಿಗೆ ಗೌರಿಯ (ರಾಮದಾಸನ ಹೆಂಡತಿ) ಪಾತ್ರ, ಶ್ರೀಮತಿ ಶ್ಯಾಮಲಾ ರಾಧೇಶ್ ಅವರಿಗೆ ಪಕ್ಕದ ಹಳ್ಳಿಯ ಹೆಂಗಸಿನ ಪಾತ್ರ ಬಂತು. ಕು. ಮೈತ್ರಿ ಹಾಗೂ ಕು. ಮಹತಿ ಇವರಿಗೆ ವಾರಕರಿ ಪಾತ್ರದ ಸಂಗಡ, ದೇವರ ಹಾಡಿಗೆ ನೃತ್ಯದ ಜವಾಬ್ದಾರಿ ಬಂತು. ಶ್ರೀ ಶಶಿಕಾಂತ್ ಜೋಶಿ ಅವರಿಗೆ ವಾರಕರಿ ಪಾತ್ರದ ಜೊತೆಗೆ ಭಿಕ್ಷುಕನ ಪಾತ್ರ ದೊರೆಯಿತು. ಅದು ಸಹ ಹಾಡಿನ ಜೊತೆಗೆ ಮೊದಲು ಹಿಂಜರಿದರೂ ಡಾ. ಪ್ರೋತ್ಸಾಹದಿಂದ ಹಾಡುವ ಧೈರ್ಯ ತೋರಿದರು. (ತಮ್ಮ ಕಂಠ ಅಷ್ಟು ಸರಿ ಇಲ್ಲ ಗೊತ್ತಿದ್ದು ಸಹ) ಅದಲ್ಲದೆ ಶ್ರೀ ಭೀಮ ವಾರಕರಿ ಮತ್ತು ಧನಶೇಖರನ ಮಗನ ಪಾತ್ರ ಹಾಗೂ ಚಿ| ಸುಶಾಂತ ಪೂಜಾರಿ ವಾರಕರಿಗಳಾದರು. ಮಾರ್ಚ್ ತಿಂಗಳಿನಲ್ಲಿ ಪ್ರಾರಂಭವಾದ ನಾಟಕದ ತಾಲೀಮು ಮೊದಲು ಸಮೂಹ ಹಾಡುಗಳ ಅಭ್ಯಾಸ ಆರಂಭವಾಯಿತು. ಸಾಕಾರ ನಾಟಕದ ಅವಧಿ 1 ಗಂಟೆ 10 ನಿಮಿಷ. ಆದರೆ ಅದರಲ್ಲಿರುವ ಹಾಡುಗಳ ಸಂಖ್ಯೆ 12, ಅದು ಸಹ ಪ್ರತಿಯೊಂದು ಸುಮಾರು 3 ನಿಮಿಷ ಅವಧಿಯವರೆಗೆ. ಹೆಚ್ಚು ಕಡಿಮೆ ಪ್ರತಿದಿನ ಎಲ್ಲರೂ ಸಂಜೆ ೬.೩೦ ನಂತರ ಸೇರುತ್ತಿದ್ದೆವು. ಯಾವಾಗಲೂ ಒಂದಿಬ್ಬರು ಬರ್ತಾ ಇರಲಿಲ್ಲ. ಬಹುಶಃ ಅವರವರ ಕೆಲಸದ ಒತ್ತಡದ ಕಾರಣದಿಂದ. ಎಷ್ಟೋ ಸಹ ನಟರು ಬರಲಿಲ್ಲದಾಗ ಶ್ರೀಮತಿ ಭವಾನಿ ಹಾಗೂ ಡಾ. ಅವರು ಅವರ ಪಾತ್ರಗಳ ತಾಲೀಮು ಮಾಡುತ್ತಿದ್ದರು ಅವರು ಬರುವವರೆಗೆ. ರಾಘವ ಅವರ ವಕೀಲಿ ವೃತ್ತಿ ಇರುವದಿಂದ ಯಾವಾಗಲೂ ಅವರಿಗೆ ಕರೆಗಳು ಬರ್ತಾ ಇದ್ದವು. ಅವರು ಪ್ರಮುಖ ವಾದಗಳನ್ನು ತೆಗೆದುಕೊಂಡು ಉಳಿದದ್ದನ್ನೂ ನಾಟಕದ ತಾಲೀಮು ಮುಗಿದ ನಂತರ ಮಾಡುತ್ತೇನೆ ಅಂತ ಆಶ್ವಾಸನೆ ಕೊಡುತ್ತಿದ್ದರು. ಶ್ರೀ ರಂಗನಾಥ ಅವರು ತಮ್ಮ ಕಚೇರಿಯ ಕೆಲಸದ ಒತ್ತಡ ನಡುವೆಯೂ ನಾಟಕದ ತಾಲೀಮು ಮಾಡುತ್ತಿದ್ದರು. ಏಕೆಂದರೆ ಎಲ್ಲಕ್ಕಿಂತ ಹೆಚ್ಚು ಹಾಡು ಇವರಿಗೆ ಇತ್ತು. ಇನ್ನೂ ಶ್ಯಾಮಲಾಳ ಹೊಂದಾಣಿಕೆಯ ಸರ್ಕಸ್ ಅವಳಿಗೆ ಗೊತ್ತು. ಅದೂ ತನ್ನ ಮಕ್ಕಳ ಸಂಗಡ, ಅವಳ ಹಾಡಿನ ಕ್ಲಾಸಿನ ಹೊಂದಾಣಿಕೆ, ಮಕ್ಕಳ ಹಾಡಿನ ಕ್ಲಾಸು, ಅಭ್ಯಾಸದ ಕ್ಲಾಸು ಮತ್ತು ಇನ್ನೇನೋ. ತಡವಾಗಿ ಯಾವಾಗಲೂ ಬರುವುದು ಭೀಮ. ಶಶಿಕಾಂತ ಜೋಶಿಯವರು ಶಾಲೆಯ ಕೆಲಸ ಮುಗಿಸಿ ತಡವಾಗಿ ಬಂದರೆ ಹಗುರವಾಗಿ ಪ್ರೀತಿಯಿಂದ ಗದರುತ್ತಿದ್ದರು. ಡಾಕ್ಟರ್ 'ಬೇಗ ಬನ್ನಿ ಅಂತ'. ಹೀಗೆ ಪ್ರತಿಯೊಬ್ಬರು ಹಲವಾರು ಕಾರಣಗಳಿಂದ

ಬರಲಾರದಾಗ ಡಾ. ಮಂಜುನಾಥ್ solo ಹಾಡುವವರ ಕಡೆ ಗಮನ ಹರಿಸಿ, ಅವರ ಕಡೆಯಿಂದ ಹಾಡಿಸಿಕೊಳ್ಳುತ್ತಿದ್ದರು. ಆ solo ಹಾಡುವವರ ಹಾಡುವ ಕೇಳುವವರಿಗೆ ಅಪ್ಯಾಯಮಾನವಾಗಿರುತ್ತಿತ್ತು (ಕರ್ಣಕಠೋರವಾಗಿರುತ್ತಿತ್ತು) ಡಾ. ಮಂಜುನಾಥ್ ಗೂ ಸಹ. ಆದರೆ ಅವರ ತಾಳ್ಮೆ ಮೆಚ್ಚುತಕ್ಕದ್ದು. ಹಾಡು ಮೊದಲು ಕಂಠಪಾಠ ಮಾಡಿದರೂ ತಪ್ಪು ತಪ್ಪಾಗಿ ಹಾಡುತ್ತಿದ್ದೆವು. ಆ ಹಾಡಿಗೆ ತಾಳ, ಭಾವ, ಶ್ರುತಿ ಪರಿಚಿತ ಯಾವುದು ಇರುತ್ತಿರಲಿಲ್ಲ. ಇಷ್ಟಾದರೂ ಡಾಕ್ಟರ್ ನಮ್ಮೆಲ್ಲರಿಗೂ ಹುರಿದುಂಬಿಸಿ ತಾಳ್ಮೆಯಿಂದ ನೀವು ದಿನಾಲೂ 4-6 ಸಲ practice ಮಾಡಿ, ಹಾಡು ಬರುತ್ತೆ ಮತ್ತು ಭಾವ, ಶ್ರುತಿ, ತಾಳ ಎಲ್ಲವೂ ಅದರ ಸಂಗಡ ಬರುತ್ತೆ, ವಿಶ್ವಾಸವಿಡಿ ಎಂದು ನಮಗೆ ಹೇಳುತ್ತಿದ್ದರು. ಇದಾದ ನಂತರ ಸಂಭಾಷಣೆಯ ಕಂಠಪಾಠ ಹಾಗೂ ನಟನೆಯ ಅಭ್ಯಾಸ ಆರಂಭವಾಯಿತು. ಸರಿಯಾಗಿ ಸಂಭಾಷಣೆ ಹೇಳಿದರೆ ನಟನೆ ಬರ್ತಾ ಇರಲಿಲ್ಲ. ನಟನೆ ಬಂದರೆ ಹಾವ ಭಾವ ಬರ್ತಾ ಇರಲಿಲ್ಲ. ಎಲ್ಲವೂ ಕಲಸು ಮೇಲೊರಗು. ಇದರ ನಡುವೆ solo ಹಾಗು ಗುಂಪಿನ ಹಾಡುಗಳು. ಅಲ್ಲಿಯೂ ಮತ್ತೆ ಶ್ರುತಿ, ಹಾವ, ಭಾವ, ತಾಳ ತಪ್ಪುವುದು ನಡೆದೇ ಇತ್ತು. ಇವೆಲ್ಲದರ ಮಧ್ಯೆ ಸಹ ನಟರ ಕೀಟಲೆಗಳು, ರಂಗನಾಥ ತನ್ನ ನಟನೆಯ ಸಮಯದಲ್ಲಿ ಗೌರಿ ಅಂತ ಕರೆಯದೆ ಲಕ್ಷ್ಮೀ ಅಂತ ಕರೆಯುವುದು, ರಾಘವ ಅವರು ತಿಳಿದುಕೊಂಡ ಕನ್ನಡ ಶಬ್ದದ ಬಳಕೆ ನಂತರ ಅದರ ಪರಿಹಾಸ್ಯ, ಸುಶಾಂತನ ನಡಿಗೆಯ ರೀತಿ, ಜೋಶಿಯವರು ಹಾಡಿನಲ್ಲಿ ಹಾಗೂ ನಟನೆಯಲ್ಲಿ ಮಾಡುವ ತಪ್ಪುಗಳು, ಇವೆಲ್ಲವುಕ್ಕಿಂತ ಧೈರ್ಯಾ ಅವರು ಡಾ. ಮಂಜುನಾಥ್ ಅವರನ್ನು ರೇಗಿಸಿ ಅವರಿರಿಂದ ಪ್ರೀತಿಯಿಂದ ಬೈಸಿಕೊಳ್ಳುವುದು. ಇವೆಲ್ಲವನ್ನೂ ನೋಡುವುದೇ ಒಂದು ಮೋಜು. ಇದೇ ಸಮಯಕ್ಕೆ ಕು. ಸಾಯಿ ತೇಜ್ ಗಣೇಶ ಹಾಗೂ ವಿಠ್ಠಲನ ಪಾತ್ರ ಮಾಡುವವರಾದರೆ ಸಾಯಿನಾಥ ತಬಲಾ ನುಡಿಸುವವರಾದರು. ಶ್ರೀ ಸಚಿನ್ ಹಾರ್ಮೋನಿಯಂ ನುಡಿಸುವವರಾದರು. ಈಗ ಈ ವಾದ್ಯಗಳ ಸಂಗಡ ನಮ್ಮ ಹಾಡು ಹಾಗೂ ನಟನೆಯ ತಾಲೀಮು ಪ್ರಾರಂಭವಾಯಿತು. ಇಲ್ಲಿಯೂ ಸಹ ಗೊಂದಲವೋ ಗೊಂದಲ. ಅವರ ಶ್ರುತಿ ಬೇರೆ, ಇನ್ನು ತಬಲಾ ಬಾರಿಸುವವರ ರೀತಿ ಇನ್ನೂ ಭಿನ್ನ. ಈ ಎಲ್ಲವನ್ನೂ ಅತಿ ತಾಳ್ಮೆಯಿಂದ ನಿಭಾಯಿಸಿಕೊಂಡು ಎಲ್ಲರನ್ನೂ ಒಂದು ತಹಬದಿಗೆ ತಂದ ರೀತಿಗೆ ನಾವೆಲ್ಲರೂ ಡಾ. ಮಂಜುನಾಥ್ ಅವರಿಗೆ ಚಿರಋಣಿ.

ಇನ್ನು ನಾಟಕದ ದಿನಗಳು ಸಮೀಪ ಬರುತ್ತಿರುವಾಗ (ಕೇವಲ 10-12 ದಿನವಿರುವಾಗ) ರಾಘವನ ಮಕ್ಕಳಾದ ಚಿ. ಚಿತ್ರರಥ ಹಾಗು ಕು. ಹರ್ಷಿಕಾ ವಾರಕರಿಗಳಾಗಿ ಬಂದು ಸೇರಿದರು. ಅವರು ಸಹ ಬೇಗನೇ ನಟನೆ ಕುಣಿತ ಕಲಿತು ತಂಡದಲ್ಲಿ ಬೆರೆತು ಹೋದ ರೀತಿ ಶ್ಲಾಘನೀಯ. ಈ ನಾಟಕದ ತಾಲೀಮಿನ ಸಮಯದಲ್ಲಿ ಅದಕ್ಕೆ ಬೇಕಾದ ಪರಿಕರಗಳು- ಕೋಲು, ತಟ್ಟೆ ಶಿವಲಿಂಗದ ಪ್ರತಿಮೆ, ವಿಠ್ಠಲನ ಪ್ರತಿಮೆ, ನೇಕಾರನ ಮಗ್ಗ ಇತ್ಯಾದಿ ಅಸೋಸಿಯೇಷನ್ ಯಿಂದ ಒದಗಿದವು. ನಾಟಕ ಇರುವ ಹಿಂದಿನ ದಿನ ಅಂದರೆ 1ನೇ ಮೇ ಎರಡು ಸಲ ತಾಲೀಮು ಕೆಳಗಡೆ ಮಾಡಿದೆವು. ವಿಪರ್ಯಾಸ ಅಂದರೆ ನಾವು ಯಾವತ್ತೂ ಎಲ್ಲರೂ ಕೂಡಿ 2 ನೆಯ ಮಹಡಿಯಲ್ಲಿರುವ ರಂಗಸ್ಥಳದಲ್ಲಿ ತಾಲೀಮು ಮಾಡಲೇ ಇಲ್ಲ. ಮೊದಲು ಕೆಲಸಲ ರಂಗಸ್ಥಳ ಸಿಕ್ಕಾಗ ನಮ್ಮಲ್ಲಿನ ಕೆಲ ನಟರು ಬರಲಿಲ್ಲ. ಎಲ್ಲ ನಟರು ಬಂದಾಗ ರಂಗಸ್ಥಳ ಸಿಗಲಿಲ್ಲ. ಹೀಗಾಗಿ ಎಲ್ಲರಿಗೂ ತಳಮಳ, ಆತಂಕ ಮನಸ್ಸಿನಲ್ಲಿ ಇದ್ದೇ ಇತ್ತು. "ಹೇಗೆ ನಾವೆಲ್ಲರೂ ರಂಗಸ್ಥಳದಲ್ಲಿ ಸಂಯೋಜನೆಯಿಂದ ನಾಟಕ ಮಾಡುತ್ತೇವೆ ಎಂದು. ಎಲ್ಲರೂ ಆ ದೇವರ ಮೇಲೆ ಭಾರ ಹಾಕಿ ಪಾಂಡುರಂಗ ನೀನೇ ಕಾಪಾಡಪ್ಪ" ಅಂತ ಮನಸ್ಸಿನಲ್ಲಿ ಬೇಡಿಕೊಂಡರು. ನಾಟಕದ ದಿನ ಅಂದರೆ ಮೇ 2 ಎಲ್ಲರೂ ಮಧ್ಯಾಹ್ನ 3 ಗಂಟೆಗೆ ಇರಬೇಕೆಂದು ಸುಗ್ರೀವಾಜ್ಞೆ ಬಂತು. ಮರುದಿನ ಎಲ್ಲರೂ ಸರಿಯಾಗಿ 3 ಗಂಟೆಗೆ ಬಂದು ಸೇರಿದೆವು. ಮೊದಲು ಎಲ್ಲರೂ makeup ಮಾಡಿಕೊಳ್ಳಿ ಎಂದು ಡಾ. ಮಂಜುನಾಥ್ ಅವರು ಹೇಳಿ ತಾವು ರಂಗಸ್ಥಳದ ಪೂರ್ವ ತಯಾರಿ ಮಾಡಲು ಹೋದರು. ಇತ್ತ ಎಲ್ಲರೂ ನಗೆ ಚಟಾಕಿಗಳನ್ನು ಹಾರಿಸುತ್ತಾ ಮೇಕಪ್ ಮಾಡಿಸಿಕೊಂಡು ತಮ್ಮ ವಸ್ತ್ರಾಲಂಕಾರಗಳನ್ನು ಮತ್ತು ತಲೆಗೆ ಕೆಂಪು ಪೇಟ ಕಟ್ಟಿಕೊಂಡು ಸೆಲ್ಫಿ ತೆಗೆಸಿಕೊಂಡರು. ಮೈತ್ರಿ, ಮಹತಿ ಹಾಗು ಸುಶಾಂತ್ ಮೀಸೆ ಹಚ್ಚಿಸಿಕೊಂಡು ತಾವು ಹೇಗೆ ಕಾಣೀಸುತ್ತೇವೆಂದು ನೋಡಿ ಸಂಭ್ರಮಗೊಂಡರು. ಪ್ರಾಸ್ತಾವಿಕ ಶುಭಾರಂಭದ ಭಾಷಣದ ನಂತರ ನಮ್ಮ ನಾಟಕ ಪ್ರಾರಂಭವಾಗುತ್ತದೆ ಅಂತ ಹೇಳಿದರು. ಅಂತೂ ಇಂತೂ ಆ ಭಾಷಣದ ಭರಾಟೆ ಮುಗಿದಾಗ ವೇಳೆ 7.30. ಜನರೆಲ್ಲ ಕಾಯ್ತಾ ಕುಳಿತಿದ್ದರು, ಯಾವಾಗ ನಾಟಕ ಪ್ರಾರಂಭವಾಗುತ್ತೇ ಅಂತ. ನಂತರ ರಂಗಪೂಜೆ ಮಾಡಿ ನಾಟಕ ಪ್ರಾರಂಭ ಮಾಡಿದಾಗ 7.45. ಆಮೇಲೆ ನಾವೆಲ್ಲರೂ ತಲ್ಲೀನರಾಗಿ ನಾಟಕ ಮಾಡಿ ಮುಗಿಸಿದಾಗ ವೇಳೆ 9 ದಾಟಿತ್ತು. ವೇಳೆ ಹೋದದ್ದೇ ಗೊತ್ತಾಗಲಿಲ್ಲ. ಸಭಿಕರ ಕರತಾಡನವೇ ನಮ್ಮ ನಾಟಕದ ಯಶಸ್ಸಿನ ಗುರುತು. ಆದರೆ ಈ ನಾಟಕದ ಪೂರ್ಣ ಯಶಸ್ಸಿನ ಪಾಲು ಡಾ. ಮಂಜುನಾಥ್ ಹಾಗೂ ಮಂಜುನಾಥಯ್ಯ ಅವರಿಗೆ ಸಲ್ಲಬೇಕು. ಅವರ ದೂರಾಲೋಚನೆ ಅವರು ನಟರನ್ನು ಹಂತ ಹಂತವಾಗಿ ತಿದ್ದುವ ಪರಿ, ನಟರಿಂದ ಎಷ್ಟೇ ತಪ್ಪಾದರೂ ಅದನ್ನು ಹೊಟ್ಟೆಗೆ ಹಾಕಿಕೊಂಡು, ಅವರನ್ನು ಹುರಿದುಂಬಿಸಿ, ಅವರಿಗೆ ಪ್ರೋತ್ಸಾಹ ಕೊಟ್ಟು, ಪ್ರೀತಿಯಿಂದ ಬೈದು, ಒಂದು ರೂಪಕ್ಕೆ ತಂದು, ಅವರಿಂದ ಪ್ರಸ್ತುತ ಪಡಿಸುವ ರೀತಿ ಮೆಚ್ಚುತಕ್ಕದ್ದು. ಅದೂ ಸಹ ಸಂಗೀತ ನಾಟಕ. ಡಾ. ಅವರಿಗೆ ನಮ್ಮೆಲ್ಲರ ವತಿಯಿಂದ ಶತಶತ ನಮಸ್ಕಾರಗಳು. ಡಾ. ಮಂಜುನಾಥ್ ಎಲ್ಲ ನಟರನ್ನು ಹಾಗು ನಮ್ಮ ಈ ನಾಟಕಕ್ಕೆ ಸಹಾಯ ಮಾಡಿದ ಎಲ್ಲರನ್ನು ಪರಿಚಯಿಸಿ ಪ್ರೀತಿ ಭೋಜನಕ್ಕೆ ಎಲ್ಲರಿಗೂ ಕರೆಯಿತ್ತಾಗ ಒಂದು ಮೋಜಿನ ಪ್ರಸಂಗ ನಡೆಯಿತು. ಸಭಿಕರಲ್ಲಿ ಅಭಿಮಾನಿಯೊಬ್ಬರು ಭೀಮನಿಗೆ ಕಿರುಕಾಣೀಕೆ ನೀಡುತ್ತಾ (ಅಂದರೆ ಇಂಥವರು ಇಂಥವರಿಗೆ ಇಷ್ಟು ಕಿರುಕಾಣಿಕೆ ಎಂದು) ಆದರೆ ಮುಂಬಯಿಯಲ್ಲಿ ಈ ರೀತಿಯ ಪ್ರಸಂಗ ಬಹು ಅಪರೂಪ. ನಂತರ ಇದೇ ನಾಟಕ 'ಸಾಕಾರ' ನಂತರದ ದಿನಗಳಲ್ಲಿ ಬಿ.ಎಸ್.ಕೆ.ಬಿ ಯ ಗೋಕುಲದಲ್ಲಿ ಪ್ರಸ್ತುತ ಪಡಿಸಿದಾಗ ತುಂಬಿದ ಸಭೆಯಲ್ಲಿ ಎಲ್ಲರಿಂದಲೂ ಪ್ರಶಂಸೆ ಪಡೆಯಿತು.

# ಉತ್ಖನನ

**✍ ಸಪ್ನಾ ಕಟ್ಟಿ**

ದಂಡೆಗಪ್ಪಳಿಸುತ್ತಿದ್ದ ಸಾಗರದಲೆಗಳನ್ನೇ ದಿಟ್ಟಿಸುತ್ತಿದ್ದಾಗ ರವಿಯ ನೆನಪಾಗಿತ್ತು. "ಅದೇನು ಮಹಾರಾಯ್ತಿ ಅಷ್ಟು ಕಡಲಹುಚ್ಚು ನಿಂಗೆ ಅಂಥಾದ್ದೇನಿದೆ ಅದರಲ್ಲಿ? ಅದೇ ನೀಲಿ ಅದೇ ಅಲೆ ಅದೇ ಉಸುಕು" ಅಂತ ಗೊಣಗಾಡುವವನಿಗೆ ಕಡಲಿಗಿಳಿಯೋದೆಂದರಂತೂ ಸಖತ್ ಅಲರ್ಜಿ.

"ಹೊಟ್ಟೇಲಿ ಎಂಥೆಂಥಾ ಗುಟ್ಟು ತುಂಬಿಕೊಂಡಿದ್ರೂ ದಂಡೆಗ್ಹೊತ್ತು ತರೋದು ಮಾತ್ರ ಹಗುರು ಮರಳಿನ ಚಿತ್ತಾರ, ಕ್ಷಣದಲ್ಲೇ ಅದನ್ನೂ ಕೂಡ ಒರೆಸಿ ಒಗೆವ ಕಡಲಿನಾಟ ವಿರಾಟ ಅನ್ನಿಸೋಲ್ವೆ?" ಅಂದರೆ "ಯಾರ ಹೊಟ್ಟೇಲಿ ಏನಿದೆಯೋ ಕಟ್ಕೊಂಡು ಮಾಡೋದೇನು? ಈಗಂತೂ ನನ್ನೊಟ್ಟೆಗೆ ಏನಾರೂ ಹಾಕ್ಕೋಬೇಕು ನಡಿ" ರವಿಯ ಸಸಾರ ಉತ್ತರಕ್ಕೆ ನಂಗ್ಯಾವತ್ತೂ ಸಿಡಿಮಿಡಿ. "ರವಿ ಉತ್ಖನನ ಅಂದ್ರೆ ಭೂಮಿಯ ತಳದಲ್ಲೋ ಸಮುದ್ರದಾಳದಲ್ಲೋ ಹೂತಿರುವ ಮಡಕೆಯ ಚೂರುಗಳನ್ನು ಹೆಕ್ಕೋ ತಮಾಷೆಯಲ್ಲ. ಕಳೆದುಹೋದ ಸಾಮ್ರಾಜ್ಯದ, ಅದರ ಕುಸಿದ ಮೌಲ್ಯಗಳ ಅನಾವರಣ; ಆ ಕುಸಿತಕ್ಕೆ ಕಾರಣ ಕಂಡುಕೊಳ್ಳುವ ಪ್ರಯತ್ನ. ಅದೇ ತಾನೇ ನವ ನಾಗರಿಕತೆಗೆ ಬುನಾದಿ? ಥೂ ನಿಂಗೆ ನನ್ನ ಕ್ಷೇತ್ರದಲ್ಲಿ ಒಂಚೂರೂ ಆಸಕ್ತಿ ಇಲ್ಲಪ್ಪಾ" ಅಂತ ಕೆನ್ನೆಯೂದಿಸಿದರೆ "ನಂಗಾ? ತುಂಬಾನೇ..ಆಸಕ್ತಿ ಕಣೆ. ಆದ್ರೆ ಹಳೆಯ ಕೋಟೆಕತ್ತಳೆಗಳಲ್ಲಲ್ಲ, ನನ್ನ ಮುಂದಿರೋ ಈ ಜೀವಂತ ಬೊಂಬೆಯಲ್ಲಿ" ಅನ್ನುತ್ತ ನನ್ನ ಮೂಗು ಹಿಂಡಿ ಗಲ್ಲ ಸವರಿದರೆ ಜೇನು ಸುರಿವ ಆ ಧ್ವನಿಗೆ, ಕಣ್ಣಂಚಿನ ನೋಟಕ್ಕೆ, ತುಂಟಾಟಕ್ಕೆ ಕಾವೇರಿದ ನನ್ನೆದೆಯಿಂದ ಪ್ರಶ್ನೋತ್ತರಗಳೆಲ್ಲ ಆವಿ! ವೈಚಾರಿಕ ಚರ್ಚೆ ಅಲ್ಲಿಗೇ ಬಂದು! ಆದರೆ ನಿನ್ನೆ ನಾಳೆಗಳನ್ನು ಗಾಳಿಗೆ ತೂರಿ ಇಂದಿನ ಇಂಚಿಂಚನ್ನೇ ಈಂಟುವ ಅವನ ಈ ಸ್ವಭಾವಕ್ಕಲ್ಲವೆ ನಾ ಮನಸೋತದ್ದು.

ಪಪ್ಪನಿಗೆ ರವಿಯನ್ನು ಪರಿಚಯಿಸುವಾಗ ಮಾತ್ರ ಚಿಟ್ಟೆ ಹಾರಾಡಿತ್ತು ಹೊಟ್ಟೆಯಲ್ಲಿ. ಡಿಗ್ರಿಯ ಕೊನೆಯ ಸೆಮಿಸ್ಟರಲ್ಲಿ ಅಂತೂ ಅಳೆದೂ ಸುರಿದೂ ಅವರ ವಾರಾಂತ್ಯದ ಮೋಜುಕೂಟವೊಂದಕ್ಕೆ ರವಿಯನ್ನು ಕರೆದೊಯ್ದು ನೇರವಾಗಿ "ಪಪ್ಪ ಇವರು ರವಿ ಮೂರ್ತಿ, ಗಾಯಕರು; ಬಲು ಪ್ರತಿಭಾವಂತರು ನಮ್ಮಂತೆಯೇ ಮೂಲತಃ ಕರ್ನಾಟಕದವರು" ಎಂದವಳು ತುಸು ತಡೆದು "ನನ್ನ ಅತ್ಯಂತ ಆಪ್ತ ಸ್ನೇಹಿತರು" ಎಂದು ಸೇರಿಸಿದಾಗ ಕಣ್ಣರಳಿಸಿದ್ದ ಪಪ್ಪ ಕೆಂಪೇರುತ್ತಿದ್ದ ನನ್ನ ಕೆನ್ನೆಗಳನ್ನೂ ರವಿಯ ಸಾದಾ ಶೇರವಾನಿ, ಕೊಲ್ಹಾಪುರಿ ಚಪ್ಪಲಿ, ಗಡಿಯಾರವಿಲ್ಲದ ಕೈಯನ್ನು ಏಕಕಾಲದಲ್ಲಿ ಅಳೆದದ್ದು ನಾ ಕಂಡಿರಲಿಲ್ಲ ಅಂತಲ್ಲ ಆದರೆ ಅರೆಗಳಿಗೆಯಷ್ಟೆ ತಕ್ಷಣ ಸಾವರಿಸಿಕೊಂಡವರು ರವಿಯ ಕೈಯನ್ನು ಗಟ್ಟಿಯಾಗಿ ಕುಲುಕಿ "ಸಂಗೀತ ವಾಹ್ ದ್ಯಾಟ್ಸ ಡಿವೈನ್ ಆರ್ಟ, ಗ್ರೇಟ್ ಚಾಯ್ಸ ಇಶಾ" ಅಂತ ನನ್ನೆಡೆ ನೋಡಿ ಸುಂದರವಾಗಿ ನಕ್ಕಿದ್ದರು.

"ವಾವ್ ನನ್ನನ್ನೂ ನನ್ನ ಬಡತನವನ್ನೂ ಒಂದೇ ನೋಟದಲ್ಲಿ ಅಳೆದರಷ್ಟೇ ಅಲ್ಲ ನಮ್ಮ ಪ್ರೇಮ ಅವರ ಅಪ್ಪಣೆಯ ಹಂತ ದಾಟಿದೆ ಅಂತ ಅರೆಗಳಿಗೆಯಲ್ಲಿ ಲೆಕ್ಕ ಹಾಕಿ ನಮ್ಮ ಸಂಬಂಧಕ್ಕೆ ಹಂಗೇ ಸೀಲು ಒತ್ತಿಬಿಟ್ಟರಲ್ಲ ನಿಮ್ಮಪ್ಪ, ಬಿಸಿನೆಸ್ ಚುಂಬಕ ಪ್ರದೀಪ ಪಾಟೀಲ ಅಂದರೆ ಸುಮ್ಮನೆಯೆ?" ರವಿಯೆಂದಾಗ ಅವನ ಧ್ವನಿಯಲ್ಲಿದ್ದ ನವಿರು ವ್ಯಂಗ್ಯವನ್ನು ಕಾಣುವ ಸ್ಥಿತಿಯಲ್ಲಿ ನಾನೆಲ್ಲಿದ್ದೆ? ಎದೆಯಲ್ಲಿದ್ದುದು ಒಂದೇ ಮಾತು "ಪಪ್ಪ ರವಿಯನ್ನು ಒಪ್ಪಿಕೊಂಡುಬಿಟ್ಟರು!"

ಸರಳ ಸಮಾರಂಭ, ಜೊತೆಗೆ ಹೆತ್ತವರಿಂದ, ಅತ್ತೆಮಾವನಿಂದ ಅಕ್ಕರೆಯ ಆಶೀರ್ವಾದ! ಖುಷಿಗೆ ಹೂವಾಗಿದ್ದೆ ನಾ. "ನಿಂತರೆ ಪಾಚಿಗಟ್ಟುತ್ತೆ ಬದುಕು. ಯುಟ್ಯೂಬಗೆ ಅಪಲೋಡ್ ಮಾಡಿದ್ದ ನಿನ್ನ ಭಜನೆಗಳನ್ನು ಪುಣೆಯ ಖ್ಯಾತ ಹಿಂದೂಸ್ತಾನಿ ಹಾಡುಗಾರ ಉಸ್ತಾದ ಶಮಿಯುಲ್ಲಾ ಖಾನ್ ತುಂಬಾ ಮೆಚ್ಕೊಂಡಿದ್ದಾರಲ್ವಾ? ಅಲ್ಲಿಗ್ಹೋಗಿ ನಿನ್ನ ನೆಚ್ಚಿನ ಖಯಾಲ ಹಾಡುಗಾರಿಕೆಯಲ್ಲಿ ಪರಿಣಿತಿ ಸಾಧಿಸು. ಈಗ ಎಲ್ಲಾದಕ್ಕೂ ಸ್ಪೆಶಾಲಿಟಿ ಬೇಕಮ್ಮಾ ಮರಿ" ಅಂತೆಲ್ಲ ಹುರಿದುಂಬಿಸಿದರೆ ಆ ಕೂಡಲೇ ಹೊರಟು ನಿಂತವನ ನಿರ್ಮೋಹದ ನೆನಪೀಗ ಒಮ್ಮೆಲೆ ಅಲೆಯಂತೇಕೆ ಅಪ್ಪಳಿಸಿತೋ? ಆದ್ರು ಎದೆ ಭಾರ, ಆದರೂ ಮತ್ತೆ ಮತ್ತೆ ತೋಯ್ಯ್ವ ಜಿದ್ದೀ ಮನ.

ಅವನಾಗ ಬಿಲಾವಲ ಭಾಗ್ಯಶ್ರೀ ರಾಗಗಳ ಖಯಾಲಗಳಲ್ಲಿ ಮೀಯುವ ರಸಋಷಿ, ನಾನು ಸನ್ನತಿಯ ಭಗ್ನ ಕಾಳಿಮಂದಿರದ ಅವಶೇಷಗಳ ಜಗತ್ತಿನ ಅಭ್ಯಾಸಕಿ! ಆದರೆ ಪ್ರಕೃತಿಗದೆಂಥ ತಡೆ? ಸಣ್ಣಗೆ ಶುರುವಾಗಿದ್ದ ವಾಂತಿ ಉಮ್ಮಳಿಕೆಗಳ ಸಂಭ್ರಮದ ಸುದ್ದಿ ರವಿಗೆ ನೀಡಲು ನಾ ಕಾಯ್ದರೆ ಅಪರಾತ್ರಿಯೊಂದು ಫೋನಾಯಿಸಿ ಅಚ್ಚರಿ ಕೊಟ್ಟವ ಮಾತ್ರ ಅವನೇ. "ಇಶೂ ನಾಳೆ ಬೆಳಿಗ್ಗೆನೇ ಹೊರಟು ಬಾ, ಇಲ್ಲಿ ಸ್ವರನಿನಾದ ಕಾರ್ಯಕ್ರಮದಲ್ಲಿ ನನ್ನ ಕಚೇರಿಯಿದೆ, ಮುಖ್ಯ ಅತಿಥಿ ಯಾರು ಗೊತ್ತಾ? ಸಂಗೀತ ದೈತ್ಯ ಪಂಡಿತ ಯಶವರ್ಧನ್ ಗೋಯಂಕಾ ಕಣೆ!" ಅಂತ ಬಡಬಡಿಸಿದಾಗ ಫೋನಿಂದಲೇ ತೊಟ್ಟಿಕ್ಕುತ್ತಿದ್ದ ಅವನ ಖುಷಿಗೆ ಹುರುಪಾಗಿ ತತ್ಕಾಲ ಟಿಕೆಟ್ಟಿಗೆ ದುಪ್ಪಟ್ಟು ಹಣ ತೆತ್ತು ಪುಣೆಗೆ ದಾವಿಸಿದ್ದೆ.

ರವಿಯ ರಾಗಾಲಾಪ ತಾನಗಳ ಲಹರಿಗೆ, ಅವನ ಸ್ವರಮಾಧುರ್ಯದ ಮೋಡಿಗೆ ಹುಚ್ಚೆದ್ದು ಕುಣಿದ ಜನರ ಮಧ್ಯ ನಾ ತೇಲಿಹೋದಾಗ ಒಂದು ಜೋಡಿ ಕಂಗಳು ಮಾತ್ರ ನಿರ್ಭಾವುಕವಾಗಿದ್ದನ್ನು ನೋಡಿದವ ರವಿಯೊಬ್ಬನೆ. ವೇದಿಕೆಯಿಂದ ತಟ್ಟನೆ ಇಳಿದು ನಡೆದ ತಮ್ಮನ್ನೇ ಹಿಂಬಾಲಿಸಿದವನನ್ನು ತಡೆದ ಪಂಡಿತಜೀ "ಕಲೆಯ ಆರಾಧನೆಗೂ ದೈವಸಂಕಲ್ಪ ಬೇಕು ಮಗು, ಸಂಗೀತ್ ತೇರೆ ಬಸ್ ಕಿ ಬಾತ ನಹಿ ಹೈ" ಅಂದವರೇ ಸರಸರನೇ ನಡೆದುಬಿಟ್ಟಿದ್ದರು.

ನಿರಾಶೆ ಹತಾಶೆಗಳಲ್ಲಿ ಚೂರುಚೂರಾಗಿದ್ದ ರವಿಯನ್ನು ಹೇಗೆ ಸಂಭಾಳಿಸಿದೆ ಅಂತ ನಾನೇ ಬಲ್ಲೆ. ಹದಿನೈದು ದಿನ ಅನ್ನ ಕಲಿಸಿ ತಂದು ಅವ ಕೂತಲ್ಲೇ ತಿನ್ನಿಸುತ್ತಾ, ತಟ್ಟಿ ಮಲಗಿಸುತ್ತಾ ಅವನ ತಾಯಾಗಿದ್ದೆ. ಹೊಸ ತಾಯ್ತನದ ತುಡಿತ ಹೇಳಿಕೊಳ್ಳುವ ನನ್ನಾತುರಕ್ಕೆ ಮಾತ್ರ ಅವ ನಿರ್ಲಿಪ್ತ! ಮನಸ್ಸಿಗೆ ನೋವಾಗಿದ್ದರೂ ಅವನಿಗೇನನ್ನಲೂ ಮನಸ್ಸು ಬಾರದೆ

ಅಮ್ಮನಲ್ಲಿ ಹೇಳಿಕೊಂಡರೆ "ಇಶೂ ತಾಯ್ತನ ಹೆಣ್ಣನ್ನು ತಟ್ಟುವಂತೆ ಗಂಡನ್ನು ಹೇಗೆ ತಟ್ಟೀತು ಹೇಳು. ಹೊರದೆ ಹೆರದೆ ತಂದೆಯಾಗೋರಲ್ವೆ ಅವರು? ನಿಂಗೆ ಅವ ಪಂಡಿತ ಭೀಮಸೇನ ಜೋಶೀನೋ ಜಸರಾಜೋ ಆಗ್ದೇ ಇದ್ರೆ ಬೇಜಾರಿಲ್ಲ ಗಂಡನಾಗಿ ಮಾತ್ರ ಪರಫೆಕ್ಟೇ ಇರಬೇಕಂದ್ರೆ ಹ್ಯಾಗೆ? ದಾಂಪತ್ಯ ಒಂಥರಾ ಉಪ್ಪಿನಕಾಯಂತೆ ಕಣೆ, ಮೊದಲು ಒಗರೊಗರು ಕಳೆತಂತೆ ರುಚಿ" ಅಮ್ಮ ಕಿಲಕಿಲನೆ ನಕ್ಕರೆ ನಾ ಪೆಚ್ಚು. ಆದರೆ ಸಂಜೆಯೇ ರವಿ ಟಾನಿಕ್ಕು, ಗುಳಿಗೆಗಳನ್ನು ತಂದದ್ದಷ್ಟೇ ಅಲ್ಲ ಅಕ್ಕರೆಯಿಂದ ತಾನೇ ಬಾಯಿಗೆ ಹಾಕಿ ನುಂಗಿಸಿದಾಗ "ಕಲಿಕೆ ತುಂಬಾ ಫಾಸ್ಟು ನನ್ನ ಮರೀದು" ಅಂತ ಹಣೆಗೆ ಮುತ್ತಿಟ್ಟರೆ ಸುಮ್ಮನೆ ನಿಟ್ಟಿಸಿದ್ದ.

ಹದಿನೈದು ದಿನಗಳ ಒತ್ತಡಕ್ಕೋ ಆರೋಗ್ಯ ನಿರ್ಲಕ್ಷಿಸಿದ್ದಕ್ಕೋ ಮಾರನೆಯ ಬೆಳಿಗ್ಗೆ ಸೀರೆ ಕಡುಗೆಂಪಾದಾಗ ಚಿಟ್ಟನೆ ಚೀರಿದ್ದಷ್ಟೇ ನೆನಪು. ಸಂಜೆಗೆ ಪುಣೆಯಿಂದ ನೇರ ಆಸ್ಪತ್ರೆಗೆ ಬಂದ ರವಿಯ ಮೊಗದಲ್ಲಿದ್ದುದು ನೋವೇ, ಆದರೂ ಅದರೆಡೆಯಲ್ಲಿಣುಕಿತ್ತು ಏನೋ ಒಂದು ನಿರಮ್ಮಳತೆ! ಛೇ ಹಾಗಿರಲಾರದು – ನಿಂದೇ ಕಲ್ಪನೆ ಎಂದು ನಂಬಿಸಲು ಹಾತೊರೆದ ಮನ! ಸುಳ್ಳು ಹೇಳದ ಎದೆ ಬಡಿತಗಳಿಗೆ ಕಿವಿಯೊತ್ತಿದರೆ ತಟ್ಟನೆ ದೂರ ಸರಿದಿದ್ದನವ. ಒಮ್ಮೆಲೆ "ಇಶಾ ನನ್ನ ಮಗು, ನನ್ನ ಕನಸು ಕಸಿದುಕೊಂಡ ಈ ಊರೂ ಬೇಡ ಈ ಸಂಗೀತಲೋಕವೂ ಬೇಡ. ಇಲ್ಲಿ ಕಳೆದ ಕ್ಷಣಗಳನ್ನೆಲ್ಲ ಮರೀಬೇಕೆಂದರೆ ಒಂಟಿಯಾಗಿ ಕೆಲದಿನವಿರಬೇಕು ನಂಗೆ" ಶುಷ್ಕವಾಗೆಂದಾಗ 'ನನ್ನ ಮಗು ನನ್ನ ಕನಸು'– ಇದೇನು ಹೊಸಪರಿ? ಕೇಳಲು ಬಾಯ್ದೆರೆದರೆ ಗಂಟಲಲ್ಲಿ ಬಂದಿದ್ದು ಗೊರಗೊರ. ನಾನೂ ಅವ ಮರೆಯಹೊರಟ ಕ್ಷಣಗಳ ಅಂಶವೇ ಎಂಬ ಎದೆಗುದಿ ಹೆಚ್ಚಿತ್ತೋ ಇಲ್ಲ ಅವನ ಸಂಗೀತ ಬಿಡುವ ಮಾತಿಗೆ ನೋವಾಗಿತ್ತೋ ಗೊತ್ತಿಲ್ಲ ಬರಿದೇ ಅತ್ತಿದ್ದೆ. "ಇಶೂ ನಿನ್ನ ಪ್ರೀತಿ ಬಿಡ್ತದಾ? ನನ್ನ ಹಂಗೇ ಎಳಕೊಂಡು ಬರ್ತದೆ. ಕೆಲದಿನಗಳ ವಿರಹ ಅಷ್ಟೇ" ಅಂತ ಕಳಚಿಕೊಳ್ಳುತ್ತಿದ್ದವನನ್ನು ತಬ್ಬಿ "ನನ್ನ ಬಿಟ್ಹೋಗಬೇಡ ಕಣೋ" ಅಂತ ಮಗುವಂತೆ ಹಟ ಮಾಡಿದಾಗ "ಹೇಳು ಹಾಗಾದ್ರೆ ಆತ್ಮವಿಶ್ವಾಸ ಸತ್ತ ರವಿ ನಿಂಗೆ ಬೇಕಾ?"– ಕೊನೆಯ ಅಸ್ತ್ರ ಬಳಸಿದ್ದ. ಎಲ್ಲಾ ನಿರ್ಧರಿಸಿಯೇ ಬಂದಿದ್ದನೇನೋ ಎಂಬಂತೆ "ವಾರಣಾಸಿಯಲ್ಲಿ ಅಣ್ಣ ಇದ್ದಾನಲ್ಲ ಅಲ್ಲಿಗೆ ಹೋಗ್ತೀದ್ದೀನಿ ಸದ್ಯಕ್ಕೆ" ಅಂದವ ಸಂಜೆಯ ರೈಲಿಗೆ ನಡೆದೂಬಿಟ್ಟಿದ್ದ. ಹೋದವನಿಂದ ಫೋನು ಪತ್ರ ಯಾವುದೂ ಇಲ್ಲ ನಾನೇ ಫೋನಾಯಿಸಿದರೆ ಅಸ್ತಿತ್ವವಿಲ್ಲ ಎಂಬ ತಣ್ಣನೆ ಉತ್ತರ.

"ಅರಬ್ಬಿಸಾಗರದ ಉತ್ಖನನದಲ್ಲಿ ಸಿಕ್ಕ ದ್ವಾರಕೆಯ ಅವಶೇಷಗಳ ಅಧ್ಯಯನದಲ್ಲಿ ಆಸಕ್ತಿಯುಂಟಾ?" ಅಂತ ಕೇಳಿ ಬಂದಿದ್ದ ಪುರಾತತ್ವಜ್ಞ ಸುಂದರೇಶರ ಇಮೇಲು ಆಗ ತೋರಿದ್ದ ದಿಶೆ ಮರೆಯುವಂಥದ್ದೇ? ಕಳೆದ ನಾಲ್ಕು ತಿಂಗಳಿಂದ ಸೂರ್ಯನ ಕಡುಬಿಸಿಲಲ್ಲಿ ಸತತ ಅಗೆತ – ಶೋಧ! ಎದೆಯಲ್ಲೇ ಶಿಶಿರ ಹೆಪ್ಪುಗಟ್ಟಿರುವಾಗ ಇನ್ನೆಂಥ ಬಿಸಿ? ಅತ್ತ ರವಿ ಪಡುವಣಕ್ಕಿಳಿದನೋ ಇತ್ತ ಮನಸ್ಸೂ ಆಳಕ್ಕಿಳಿಯುತ್ತದೆ. ಅಲ್ಲೂ ಯಾವುದೋ ಗೊತ್ತಿಲ್ಲದ ಹುಡುಕಾಟ! ನನ್ನ ರವಿಯ ಮನದಂಗಳದಲ್ಲಿ ನಾನಿಳಿಯಲೇ ಇಲ್ಲ ಎಂಬ ಸತ್ಯಕ್ಕೆ ಮನ ನಿತ್ಯ ನೋಯುತ್ತದೆ.

ಮಕ್ಕಳೆಸೆದ ಚೆಂಡುಗಳನ್ನೆಲ್ಲ ದೂರಕ್ಕೊಯ್ದು ತುಂಟ ಕಡಲು ಮರುಗಳಿಗೆಯೇ ದಂಡೆಗೆ ತಂದೊಪ್ಪಿಸಿದಾಗ ಎದೆಯಲ್ಲೇನೋ ಜಿಗಿತ, ಯಾವುದೋ ಮಿಣುಕು ಆಸೆ! ಫೋನು ಬಾರಿಸಿದಾಗ ಉತ್ಸಾಹದಿಂದ ಎತ್ತಿಕೊಂಡೆ. ಪಪ್ಪನೇ. ಗಂಟಲು ಸರಿಪಡಿಸಿಕೊಂಡಂತೆ ಕೆಮ್ಮಿದವರು ಸೀದಾ ಮುದ್ದೆಗೆ ಬಂದಿದ್ದರು. "ಮೊನ್ನೆ ಬಿಸಿನೆಸ್ ಮೀಟಿಂಗಿಗೆ ಲಂಡನ್ನಿಗೆ ಹೋದಾಗ ಟ್ರಿನಿಟಿ ವಿಶ್ವವಿದ್ಯಾಲಕ್ಕೆ ಹೋಗಿದ್ದೆ. ಅಲ್ಲಿ ರವಿ ಸಿಕ್ಕಿದ್ದ. ಅವ ಅಲ್ಲಿಯೇ ಈಗ ಭಾರತೀಯ ಸಂಗೀತ ವಿಭಾಗದಲ್ಲಿ ಕೆಲಸ ಮಾಡ್ತಾನಂತೆ." ಅಂದವರೇ ಕ್ಷಣ ನಿಲ್ಲಿಸಿ "ಏನು ಅಮೋಘವಾಗಿ ಹಾಡಿದನಮ್ಮಾ!" ಅಂದಾಗ ಬೆಚ್ಚಿದೆ. "ಹೌದು ಇಶು ಅವ ಮತ್ತೆ ಹಾಡ್ತಾನೀಗ, ಅಷ್ಟೇ ಅಲ್ಲ ನಿನ್ನ ನೋಡ್ಬೇಕಂತಿದ್ದಾನೆ ಗೊತ್ತಾ? ನೌ ಚೀರ್ ಅಪ್ ಮೈ ಗರ್ಲ!" ಎನ್ನುವಾಗ ಯಾಕೋ ಎದೆಯಲ್ಲಿಲ್ಲದ ಹುರುಪು ಮಾತಲ್ಲಿ ಉಕ್ಕಿಸಿದಂತೆ ತೋರಿತು. ಮತ್ತೆರಡು ಗಳಿಗೆಯ ದೀರ್ಘ ಮೌನದ ನಂತರ ಅವರೇ ಹೇಳಿದರು. "ಇಶು ಹ್ಯಾಗೆ ಶುರು ಮಾಡ್ಲಿ ಅಂತ ನಂಗೆ ಗೊತ್ತಾಗ್ತಾಯಿಲ್ಲ ಆದರೆ ಹೇಳ್ದೇ ಇರೋ ಮಾತೂ ಅಲ್ಲವಿದು, ಆ ದಿನ ಪುಣೆಯಲ್ಲಿ ಪಂಡಿತ ಗೋಯಂಕಾ ರವಿಯನ್ನು ತಿರಸ್ಕರಿಸಿದ್ದು ತಾವಾಗಿಯೇ ಅಲ್ಲವಂತೆ. ರವಿಯೇ ಖುದ್ದು ಹಾಗೆ ಮಾಡಲು ಅವರನ್ನು ಕೇಳಿಕೊಂಡಿದ್ದನಂತೆ, ಅದೇನಾಗಿತ್ತೋ ನಿಮ್ಮಿಬ್ಬರ ಮಧ್ಯ ನಾನರಿಯೆ ಆದರೆ ಒಂದು ಮಾತಂತೂ ಖಚಿತ. ಅವನಿಗೆ ಬಿಡುಗಡೆ ಬೇಕಾಗಿದ್ದು ನಿನ್ನಿಂದ; ಸಂಗೀತದಿಂದಲ್ಲ, ಮುಂದೆ ಪಂಡಿತಜಿಯೇ ಅವನನ್ನು ಲಂಡನ್ನಿಗೆ ಕಳಿಸಿದರಂತೆ. 'ಚಂದನದ ಗಿಡಕ್ಕೆ ಸುಗಂಧ ಬೀರಬೇಡ ಎಂದಿದ್ದೆ ನಾನು, ಇಂದು ಆ ಪಾಪದಿಂದ ಮುಕ್ತನಾದೆ' ಅಂತ ರವಿಯನ್ನು ವಿಮಾನನಿಲ್ದಾಣಕ್ಕೆ ಸ್ವತಃ ಬಿಟ್ಟು ಬಂದ ಅವರೇ ನನ್ನ ಬಳಿ ಹೇಳಿದ್ದರೂ ನಿನಗೆ ನೋವಾದೀತೆಂದು ಹೇಳದೆ ಮುಚ್ಚಿಟ್ಟುಬಿಟ್ಟೆನಮ್ಮ, ನನ್ನ ಕ್ಷಮಿಸು" ಅಂದಾಗ ಕೈಯಿಂದ ಬಿದ್ದ ಫೋನಿನರಿವೇ ಇರಲಿಲ್ಲ ನನಗೆ.

ರಾತ್ರಿಯೆಲ್ಲಾ ನಿದ್ದೆಗೆಟ್ಟು ಹೊರಳಾಡಿದವಳಲ್ಲೊಂದು ನಿರ್ಧಾರ ಹುಟ್ಟುವಾಗ ಮೂಡಣದಲ್ಲಿ ಸೂರ್ಯ ಕೆಂಪಾಗಿದ್ದ. ಅಮ್ಮನಿಗೆ ಫೋನಾಯಿಸಿದ್ದೆ. ಮೊಬೈಲಿನೆದುರೇ ಕೂತಿದ್ದಳೇನೋ, ನೇರವಾಗಿ ಮಾತಿಗಿಳಿದಿದ್ದಳು.

"ಏನು ನಿರ್ಧಾರ ಮಾಡಿದೆ ಮಗು? ಬದುಕು ಕೊಟ್ಟ ಎರಡನೆ ಅವಕಾಶ....."ಎನ್ನುತ್ತಿದ್ದವಳಿಗೆ ಹುಶ್ ಅಂತ ಮಿದುವಾಗಿ ತಡೆದೆ.

"ಬದುಕು ಇನ್ನೆಷ್ಟೇ ಅವಕಾಶ ಕೊಡಲಮ್ಮಾ ನನ್ನಲ್ಲಿರೋ ಕೆಲ ಪ್ರಶ್ನೆಗಳಿಗೆ ಉತ್ತರ ದೊರಕದ ಮುನ್ನ ನಾನ್ಯಾವುದೇ ನಿರ್ಧಾರ ತಗೊಳ್ಳಲ್ಲ. ಮೊದಲನೆಯದಾಗಿ ರವಿ "ಇಶೂ ನಿನ್ನ ತೋಳಬಂಧನವೇ ನಂಗೆ ಉಸಿರುಗಟ್ಟಿಸುತ್ತಿದೆ, ಒಂಚೂರು ಸಡಿಲಿಸು" ಅಂತ ಒಂದೇ ಒಂದು ಮಾತು ನನ್ನ ಬಳಿ ಉಸುರಿದ್ದರೂ ಸಾಕಿತ್ತು ನಾನರಿತುಕೊಳ್ಳುತ್ತಿದ್ದೆ. ಅದು ಬಿಟ್ಟು ಇಷ್ಟೆಲ್ಲ ನಾಟಕ ಆಡಿದನೇಕೆ? ಅವನ ಪ್ರತಿಭೆಯ ಪರಿಮಳ ವಿದೇಶದಲ್ಲೂ ಹಬ್ಬಿದ್ದರೆ ನನಗಿಂತ ಖುಷಿಪಡುವ ಜೀವವಿರಬಹುದಿತ್ತೆ? ಬದುಕಲ್ಲಿ ತನಗೆ ಬೇಕಾದುದು ಏನು ಅಂತ ಪ್ರಾಂಜಲವಾಗಿ ಸಂಗಾತಿಯಲ್ಲೂ ಹೇಳಲಾಗದ ಅನಿವಾರ್ಯತೆ ಅದೆಂಥದು?

ಎರಡನೆಯದಾಗಿ ನನಗೆ ನೋವಾಗಬಾರದೆಂದು ಆಗ ಸತ್ಯವನ್ನು ಮುಚ್ಚಿಟ್ಟೆ ಅಂತಂದರು ಪಪ್ಪ, ಮತ್ತೀಗ ಅದನ್ನು ಹೇಳಿ ಕ್ರೌರ್ಯ ಮೆರೆದಿದ್ದೇಕೆ? ಗತಕಾಲದಲ್ಲೇ ಆ ಕಹಿಸತ್ಯ ಹೂತುಹೋಗಿದ್ದರೂ ಯಾರಿಗೆ ನಷ್ಟವಿತ್ತು?

ಮೂರನೆಯದಾಗ ನಾನು ಗರ್ಭಿಣಿಯಾಗಿದ್ದಾಗ ರವಿ ಕೊಟ್ಟ ಟಾನಿಕ್ಕು, ಮಾತ್ರೆ ತಗೊಂಡ ಮರುದಿನವೇ ಅಲ್ವಾ ನಂಗೆ ಗರ್ಭಪಾತವಾಗಿದ್ದು? ನಮ್ಮಿಬ್ಬರ ಸಂಬಂಧದ ಕುರುಹೇ ತನ್ನ ಹಾದಿಯ ತೊಡಕು ಅಂತ ಅವನೇ ಹಾಗೆ....

“ಇಶಾ...”ಅಮ್ಮ ಕಿರುಚಿದ್ದರು “ಇಷ್ಟು ಕಠೋರಳಾಗಬೇಡ ಮಗಳೆ!”

“ಅಮ್ಮಾ ವಿಶ್ವಾಸದ ಅಡಿಪಾಯ ಕುಸಿದು ಹೋಗಿದೆ. ಮತ್ತೆ ಬದುಕು ಕಟ್ಟಬೇಕೆಂದರೆ ಅದನ್ನು ಸರಿಪಡಿಸಬೇಡವೆ? ಸಂಬಂಧಗಳ ಆಳಕ್ಕಿಳಿದು ಒಳಗಿನ ಹೂರಣವನ್ನೆಲ್ಲ ಹೊರತೆಗೆಯಬೇಡವೆ? ಅಲ್ಲಿಯವರೆಗೆ ಯಾರೂ ನನ್ನ ಭೇಟಿಯಾಗೋದೂ ಬೇಡ. ಹಾಗಂತ ಎಲ್ಲರಿಗೂ ನೀನೇ ಹೇಳಿಬಿಡು. ಆಂ ಹೆದರಬೇಡ ನೀ ಕೊಟ್ಟ ಜೀವ ಮಾತ್ರ ಖಂಡಿತ ಕಳ್ಕೊಳ್ಳಲ್ಲಮ್ಮಾ” ಎಂದವಳೇ ಫೋನು ಬಂದು ಮಾಡಿ ಶಾಲೊಂದನ್ನು ಗಟ್ಟಿಯಾಗಿ ಸುತ್ತಿಕೊಂಡು ಕಡಲತೀರಕ್ಕೆ ನಡೆದೆ. ದಿಗಂತದಲ್ಲಾಗಲೇ ಸ್ವಚ್ಛ ಬೆಳಕು ಮೂಡಿತ್ತು; ಕಡಲಲ್ಲಿ ಉತ್ಪನನವೂ ಶುರುವಾಗಿತ್ತು.

## ಸುಂದರ ಸಮಾಜ

✍ ಬದರೀನಾಥ ಜಹಗೀರದಾರ

ಮಾತು–ಮನಸುಗಳ ಮಧ್ಯೆ ಮಾಧುರ್ಯವಿರಲಿ
ಮಾಡುವ ಕೆಲಸ ಕಾರ್ಯಗಳು ಆತ್ಮತೃಪ್ತಿ ನೀಡುತಿರಲಿ
ಹಗೆಯ ಕಿಡಿಗಳನು ಶಮನಗೊಳಿಸಲು ಯತ್ನಿಸಲಿ
ಅಹಂಕಾರದ ಆರ್ಭಟಕ್ಕೆ ಸಜ್ಜನತೆ ಭಯಪಡದಿರಲಿ

ಯಾವುದೂ ಶಾಶ್ವತವಲ್ಲ, ಇರುವಷ್ಟು ದಿನ ನೆಮ್ಮದಿಯಿಂದಿರಲಿ
ದ್ರೋಹ ಬಗೆಯುತ, ವಂಚಿಸುತ ಸಮಾಜಕ್ಕೆ ಹೊರೆಯಾಗದಿರಲಿ
ಹುಟ್ಟು–ಸಾವುಗಳ ನಡುವಿನ ಜೀವನ ಸಾರ್ಥಕ್ಯವ ಪಡೆಯಲಿ
ವ್ಯಕ್ತಿತ್ವಕಂಟಿದ ಶಾಪ ವಿಮೋಚನೆಗೆ ಸಮಾಜ ಸೇವೆ ಮಾಡಲಿ

ಎಲ್ಲರ ಮನದಾಳದಲ್ಲಿರುವುದು ನೆಮ್ಮದಿಯ ಜೀವನದ ಆಸೆ
ನೆಮ್ಮದಿ ಸಿಗುವುದು ಮನಸ್ಸಿನ ವಿಶಾಲತೆಯಿಂದ, ಆತ್ಮತೃಪ್ತಿಯಿಂದ
ಹಣ, ಐಶ್ವರ್ಯ, ಅಧಿಕಾರದ ದಾಹ ಬದುಕ ಖಿನ್ನವಾಗಿಸುವುದು
ಕಷ್ಟಪಟ್ಟು ದುಡಿದ ದುಡಿಮೆ ಬದುಕ ಆನಂದಮಯವಾಗಿಸುವುದು

ಭವಿಷ್ಯವ ನಂಬಿ ಬುದ್ಧಿಯ ಬಲಿಕೊಡುವ ಮನುಜರಿದ್ದಾರೆ
ಸ್ವಂತ ಬುದ್ಧಿಯಿಂದ ಆಲೋಚಿಸದಷ್ಟು ಪರಾವಲಂಬಿಯಾಗಿದ್ದಾರೆ
ಇದು ನಿಜವಾಗಿಯೂ ಮನಸ್ಸು ದುರ್ಬಲಗೊಳ್ಳುವ ಸಂದರ್ಭ
ತನ್ನ ನೆಲೆಯ ತಾ ಕಂಡುಕೊಳ್ಳಲು ವಿಫಲವಾಗುವ ಸನ್ನಿವೇಶ

ಸಾಂಸ್ಕೃತಿಕ ನೆಲೆಯಿಲ್ಲದ ಸಮಾಜ ಏನೆಂದು ಸಂದೇಶ ನೀಡುವುದು?
ಮನುಜರ ಒಳಜಗಳಗಳ ಮಧ್ಯೆ ಮೌಲ್ಯಗಳೇ ಅಳಿಯುವವು
ಯಾರಲ್ಲೂ ಮಾನವೀಯತೆಯಿಲ್ಲ, ಎಲ್ಲೆಲ್ಲೂ ವಿಕಾರ ಮನಸ್ಸಿಗರು
ಸುಳ್ಳಿನ ಮೇಲೆ ಸವಾರಿ ಮಾಡಿ ಸತ್ಯವ ಕೊಂದವರು

ಸುಂದರ ಸಮಾಜದ ಸವಿಗನಸು ಮನಸ್ಸಿನಲ್ಲಿರಲಿ, ನನಸಾಗಲು ಯತ್ನಿಸಿ
ಸಕಾರಾತ್ಮಕ ಪ್ರಯತ್ನದಿಂದ ಒಳ್ಳೆಯದನ್ನು ಸಾಧಿಸಿ
ಅಂತರಾಳದ ಮನವು ಮಾನವೀಯತೆಯ ನೆಲೆಗಾಗಿ ಹಪಹಪಿಸುತಿದೆ
ಮನುಷ್ಯತ್ವವಿದ್ದರೆ ಸಮಾಜವ ಉದ್ಧರಿಸಿ, ಇಲ್ಲವೇ ಪಲಾಯನ ಬೆಳೆಸಿ.

# OBITUARY



S N NAGARAJA RAO

Shri S N Nagaraja Rao, who was one senior most Members of the Association, expired on the night of 08 June 2022 at Bangalore. In his professional career he was an Engineer and an Administrator at Amforge Ind. Ltd, which specialised in Steel forgings and designs. He was most popular with his Theatre, Music and Sports at the Association Employees. Shri Rao equally involved in Theatre, Music and Sports at the Association in the late 50s, 60s and 70s. Our Senior Members remembered him at the Billiards Table and also a team player in V K Murthy's Music ensembles. A keen follower of all Association activities even after moving to Bangalore, his loss is irreparable to all of us. He leaves behind two sons and a daughter. We pray the Lord to bestow enough courage on the family to bear this irreplaceable loss.

# Sri Ramanujacharya and Management



- **M. A. N. Prasad**

What do we mean by the term 'Management'? In simple, common man's language it means using the various resources like men, materials, money and time optimally to produce the desired result. This process involves five key functions like planning, organizing, deploying men suitably, leading them and controlling the entire activity. All activities which are aimed at producing a certain results or attaining a certain goal need to be managed. The people who manage these activities are called as Managers.

Since studying Management as an academic discipline and obtaining degrees in it is a relatively recent phenomenon, we tend to think that the subject of Management is a recent one. True, the academic courses in Management are relatively recent. But does that make the subject itself new? Factors that make management necessary today were faced by our predecessors earlier also. Did they not resolve those issues? May be, they called it by different names or their solutions were different, but they did face these issues and they did resolve them. Perhaps in those days, people with a natural leadership quality became good managers and in the absence of any academic training the disciple imbibed the leadership or management traits from his guru.

The fact that our ancient texts could give us a good clue as to how they tackled these issues has caught the imagination of many and our ancient texts are being looked into with a new approach to see if we can glean any hints that would help us in management. While these texts may not speak of management as such, many of their contents could be applicable to management. For example, our texts may be speaking about 'Raja Dharma' or dos and don'ts for individuals under various 'Neeti shastras'. These can be applied to a business leader or a social / Political leader in maintaining his personal and professional ethics, and dealing with people. We do have a wide collection of ancient works that give us an insight into such dos and don'ts. What is important is to keep an open mind and look for any hint or suggestion that helps to manage things better in whichever field we are into.

Acharya Ramanuja has been considered as a good manager and an able administrator. We find in his life and the works he undertook a methodical application of concepts which are considered as important in Management. His activities covered the spiritual, religious and social fields and we find that he applied these concepts in all these fields, which speaks of his wide vision and concern for the welfare of all. Here is an overview of the works he carried out and how well they were managed.

Ramanuja brought about reforms in the temples of Srirangam, Tirumala and Melukote. The systems he laid down have been so well conceived that they are being followed even today, after nearly a thousand years. What were the key

elements of the system he introduced? A clear cut job description. Smaller area of operation for each group of 'kainkaryaparas' – those serving the temple - by increasing the group of 'kainkaryaparas' from the earlier ten to twenty. Clearly spelling out the authority and responsibility. Specifying well the duties at each level of activity. Giving importance to proper time management. He is said to have reviewed on a daily basis the schedule of activities for the day and the progress made. In fact, we get many incidences in Ramanuja's life that reflect the application of all aspects of management.

Ramanuja realized that man has certain basic needs like food, shelter and security. You can involve him in other pursuits only after these are met. So he took care to ensure that temples which were mini societies, too care for these basics. Once these needs were met, man needed recognition and esteem. This was provided through the offering of Thirtham and Prasadam at the temple. Now the devotee was ready to accept the higher role of serving the God and through that the society. He brought together all segments of the society and created social harmony by giving a specific role to each community in the service of the temple.

He was a great motivator. He used to mix with various workers at the temple and take interest in the work they were doing. It is said that the workers in the temple granary would usually sing folk songs while filling the granary with cleaned paddy. While going round the temple, Ramanuja would visit the granary and listen to their singing. The fact that Ramanuja would visit the granary and listen to their singing was a great motivator to these workers. He interacted with the tailors who stitched the garment to be worn by the Lord during procession, took care ensure that the vahanas were polished and shining, spoke to cooks in the madapalli urging them to maintain the highest standards of cleanliness and hygiene, and so on. Though he was a top person in charge of the temple, he made sure that he was in touch with the ground level worker and had a hands on knowledge of what was happening at the temple.

Ramanuja involved various class of people like potters, weavers, washer men, pipers, palanquin bearers, etc. in the activities of the temple and gave them specific roles. His concept was to keep these industries alive through the usage of their products in the temple. This kind of concern for the welfare of all was unique in Ramanuja. He was instrumental in building a huge tank at Thondanur which supplied water to a large the society and its farmers.

As we study the life and works of Ramanuja, we find many incidences which highlight his excellent planning, detailed insight into various subjects, good execution of plans and successful skills in interpersonal management. It is good to study his life afresh and look for clues towards good management in them.

Acknowledgement:
'Managerial Ability of Sri Ramanuja in Retrospection"
–by Sri Vaishnava Sri. A. Krishnamachari

# KNOW GREAT SCIENTISTS OF INDIA



## Satyendra Nath Bose (1894 - 1974)

Bose was one of the pioneers of Quantum Mechanics in the 1920s, with his greatest contribution being the statistics of spin zero particles. He was a scholar across many areas, but his passion and career was in mathematical physics.

Bose's greatest discovery was in the statistics of quantum particles. He set about calculating the probability of finding particles in phase space partitioned into volumes $h^3$h3 where h is Planck's constant, on the assumption that the particles are indistinguishable from one another. This gave results in accordance with experiment, but which differed from the classical result (Maxwell-Boltzmann statistics)

At first, Bose did not quite realise how profound his result was, or that he had discovered an entirely new way in which particles behaved. Dirac and Einstein both credited him with laying the foundations for quantum statistics. Here is his note to Einstein about his original paper, which shows his humility and respect for the more famous man.

Respected Sir, I have ventured to send you the accompanying article for your perusal and opinion. I am anxious to know what you think of it. You will see that I have tried to deduce the coefficient [math]8\pi \frac{ν^2}{c^3}[/math] in Planck's Law independent of classical electrodynamics, only assuming that the ultimate elementary region in the phase-space has the content *[math]h*^3[/math].

I do not know sufficient German to translate the paper. If you think the paper worth publication, I shall be grateful if you arrange for its publication in *Zeitschrift für Physik*. Though a complete stranger to you, I do not feel any hesitation in making such a request. Because we are all your pupils though profiting only by your teachings through your writings. I do not know whether you still remember that somebody from Calcutta asked your permission to translate your papers on Relativity in English. You acceded to the request. The book has since been published. I was the one who translated your paper on Generalised Relativity.

Einstein did think this worth publication, indeed he thought it profoundly important, translated it himself and had it published under Bose's name.

Paul Dirac, the great British physicist, proposed that spin zero and integer spin particles, that obey Bose statistics should be called **Bosons,** in distinction to Fermions which with their fractional spins obeyed a different statistic: Fermi-Dirac statistics,

Einstein then built on Bose's work and extended Bose statistics to atoms. He published a paper that predicted a new state of matter, the **Bose-Einstein condensate**, based on Bose's statistics -- where all the particles would occupy the same (lowest) quantum state. These condensates have since been discovered and created in the lab, where they exhibit quantum phenomena at a macroscopic scale.

As for the **Higgs Boson**, this particle was predicted independently of Bose and Einstein's work, but it was predicted (and found) to have spin zero. As a spin-zero particle, it falls into the Boson class, hence the name. Other bosons include the photon (electromagnetic force), the W and Z Bosons (weak force), the gluon (strong force) and the graviton (gravity, but not detected yet!) They are differentiated from one another by the field they mediate and their mass.

A question one could ask is why Bose did not receive the Nobel Prize. His work certainly deserves it. When asked, Bose himself replied "I have got all the recognition I deserve". A very humble, very great man.

## For the first time in history, India's birth rate has recently dropped below replacement levels. What does this mean going forward?

**- NESARU gathered Report**

India would achieve birthrate reduction without any forcible population control. Unlike China, this reduction has been gradual and thus any effects from an aging population would not be seen for another 50–60 years. By that time, we would have robots everywhere.

This is the projected demographics of India in 2050. India is well-balanced across all age groups and the majority of them would be in the 20–50 age of high productivity. With better fitness and medical advancements, the 50-year-old then might be able to compare with the 35-year-old now. This would be a perfect population mix for us to become a developed nation.




25 million babies are born in India every year. That is a massive number. We don't have enough infrastructure to nourish them all and educate them in the best way. With the drop in fertility rates, we can now protect the children and mothers better. We can educate them better, helping them become productive members 20 years from now, aligning with the goal of being a developed nation by 2050.

By having fewer children, the women can get to work and that allows for far better family and economic growth. The infrastructure of our cities will also get a breather as they don't have to serve a constantly increasing population. A stabilizing population would allow us to improve the quality of public facilities.

In all religions other than Muslims, the fertility rate is less than 2. However, improvements are seen even in Muslims. There is progress there too. If the trend continues, their fertility will align with the Hindus. Thus, by 2050 the religious mix of India is likely to be the same as today.

**Muslims' fertility rate sees sharpest decline over two decades, shows health ministry survey.** Fertility rate among Muslims is only 0.36 points higher than that of Hindus, according to the latest National Family Health Survey.

Overall, the investments in social development the past few years might be bearing fruit.

**18% more women in higher education in 5 years**

Education News: Even though the share of female students is lowest in institutes of national importance, there has been an overall increase of over 18% in female enrol.

**India has more women than men for first time, survey finds.** Survey of 650,000 households also finds falling reproductive rate, suggesting population boom is ending.

Life expectancy is up, although pollution is limiting the rise. With more investments in EV, solar etc, air pollution should fall in the next decade and should cause the life expectancy to go up even more.

**India's life expectancy inches up 2 years to 69.7:** India's life expectancy at birth inched up to 69.7 in the 2015-19 period, well below the estimated global average life expectancy of 72.6 years.

India is slowly fixing its issues one by one. In the next 5 years if it spends substantially more on child development, it will be well set for the future.

For Starters, Replacement level mean a level of reproduction in which a population exactly replaces itself from one generation to the next, It's roughly 2.1 Children per Women.

---

# Is the Varna system in Hinduism good?

**Rajiv Kurup**

**Author of The History and Philosophy of the Hinduism**

It is an outstanding system.

Selecting an academic stream based on your "innate orientation" is the best way an education system can fit aptitude with a line of work. And this is especially true for those who wish to go into "public service" in administration, politics or the military or law enforcement, or even teachers in schools/colleges and so on.

For example, in Finland which has one of the best education systems in the world, only the top 10 percentile can apply to be a teacher in Finland.

In Singapore, secondary school education is offered in four streams - special, express, normal (academic) and normal (technical). Students in the special and express streams give a different examination and are fully sponsored by the Singapore government for a course of study at any university in the world.

In India, we have unfortunately inherited the education system from our colonial masters, a system that was designed for the industrial age. And children often end up in a line of work that leads to "high salary" or "status", rather than one that is based on individual aptitude. This is a deadly flaw, and one that leads to career derailment, early burnout and takes many lives every year due to frustration or failure.

A varna based system is, one way or the other, the future of global education.

# 'ಪರ್ವ' ನಾಟಕ ಪ್ರದರ್ಶನ

ನೇಸರು ವರದಿ

ಮೈಸೂರಿನ ರಂಗಾಯಣದ ಕಲಾವಿದರು ಮುಂಬೈ ವಿಶ್ವವಿದ್ಯಾಲಯದ ಮರಾಠಿ ಭವನ್‌ದಲ್ಲಿ ಜೂನ್ 26, 2022 ಭಾನುವಾರ ದಂದು ಎಸ್. ಎಲ್. ಭೈರಪ್ಪನವರ "ಪರ್ವ" ಕಾದಂಬರಿಯ ರಂಗ ರೂಪವನ್ನು ಮುಂಬಯಿಯ ನೋಡುಗರ ಮುಂದಿಟ್ಟರು. ಮುಂಬೈ ವಿಶ್ವವಿದ್ಯಾಲಯದ ಕನ್ನಡ ವಿಭಾಗ, ಕನ್ನಡ ಕಲಾ ಕೇಂದ್ರ, ಕನ್ನಡ ಸಂಘ ಅಣು ಶಕ್ತಿನಗರ, ಕರ್ನಾಟಕ ಸಂಘದವರು ಇತ್ತ ನೆರವಿನಿಂದ ಈ ರಂಗರೂಪವನ್ನು ಕಾಣಲು ಆಯಿತು.



ರಂಗಾಯಣದ ನಿರ್ದೇಶಕರು, ಶ್ರೀ ಕಾರ್ಯಪ್ಪನವರು ತಮ್ಮ ಮೂರು ವರ್ಷದ ಗಡುವಿನಲ್ಲಿ ಮುನ್ನೋಟ ನಿಂದ ಭೈರಪ್ಪನವರ ಹೆಸರಾದ ಕಾದಂಬರಿಯ ರಂಗ ರೂಪವನ್ನು ತರಲು ಎಣಿಕೆ ಹಾಕಿದ್ದು, ನಮ್ಮೆಲ್ಲರ ಕನ್ನಡಿಗರ ಭಾಗ್ಯವೆಂದರೆ ತಪ್ಪಾಗಲಾರದು. ಅಂತೆಯೇ ಅವರು ಕಲಾವಿದರಾದ ಶ್ರೀ ಪ್ರಕಾಶ ಬೆಳವಾಡಿಯವರಿಗೆ ಈ ಹೊಣೆಗಾರಿಕೆಯನ್ನು ಇತ್ತಿದ್ದುದು ಕಾರ್ಯಪ್ಪನವರ ಮುನ್ನೋಟ ವನ್ನು ತೋರಿಸುತ್ತದೆ.

ಬೆಳವಾಡಿಯ ಭೈರಪ್ಪನವರ ಕಾದಂಬರಿಯ ನೋಟ, ಓಟಗಳಲ್ಲಿ ಏನೂ ಮಾರ್ಪಾಡಿಸದೆ, ರಂಗದ ಮೇಲೆ ತಂದಿದ್ದಾರೆ. ಮುಂಬಯಿಯ ಹೆಚ್ಚಿನ ಕಲಾವಿದರು, ಕನ್ನಡ ಅಭಿಮಾನಿಗಳು ಅಂದು ಅಲ್ಲಿ ನೆರೆದಿದ್ದರು. ಮುಂಬಯಿಯ ಹಿರಿಯ ಕಲಾವಿದರು ಹಾಗೂ ನೆರವಿತ್ತ ಸಂಸ್ಥೆಗಳ ಪದಾಧಿಕಾರಿಗಳನ್ನು ಸೇರಿಸಿ "ಬೆಳಕು" ಹಚ್ಚುವುದರಿಂದ ಮೊದಲಾದ ಈ ರಂಗ ನೋಟ ಕಾರ್ಯಪ್ಪನವರ ಮಾತುಗಳಿಂದ ಮೊದಲಾಯಿತು. 39ನೆಯ ಪ್ರದರ್ಶನ ಮುಂಬಯಿಯಲ್ಲಿ ಆಗುತ್ತಿದ್ದು, 40ನೆಯ ಪ್ರದರ್ಶನ ಪುಣೆಯಲ್ಲಿ ಆಗಿ, ಈ ಇಡೀ ಪರ್ವದ ರಂಗ ಪರ್ವ ಮುಗಿಯುತ್ತದೆ.



ಉದ್ದವಾದ ಈ ನಾಟಕದ ನಡುವಿನಲ್ಲಿ 4 ಬಿಡುವುಗಳಿದ್ದು, ಒಟ್ಟಾರೆ 6 1/2 ಗಂಟೆಗಳ ಕಾಲ ನಾಟಕ ನಡೆಯಿತು. ಆದರೆ ಈ ಮನ ಸೆಳೆದ ನಾಟಕದ ನಡುವಿನಲ್ಲಿ ಯಾವ ನೋಡುಗರೂ ಕೂಡ ನೋಡುವುದನ್ನು ಬಿಟ್ಟು ಮನೆಗೆ ತೆರಳಲಿಲ್ಲ. ಆಡುತ್ತಿದ್ದ ಕಲಾವಿದರನ್ನು ಹುಮ್ಮಿಸಲು ಚಪ್ಪಾಳೆಯ ಸುರಿ ಮಳೆಯೇ ಕಿವಿಕಿಚ್ಚುತ್ತಿತ್ತು.

ಕಲಾವಿದರಲ್ಲಿದ್ದ ಅಭಿನಯ ಚಾತುರ್ಯ, ಮಾತಿನ ಸೆಳೆವು ಎಲ್ಲರ ಎದೆ ಮುಟ್ಟುತ್ತಿತ್ತು. ಹೆಣ್ಣು ಮಕ್ಕಳೇ ಗಂಡಸಿನ ಪಾತ್ರ ಮಾಡಿದಾಗ, ಇವರು ಹೆಣ್ಣು ಮಕ್ಕಳೇ ಎನ್ನುವ ಎಣಿಕೆ ಯಾವ ನೋಡುಗರಿಗೂ ಆಗಲಿಲ್ಲ. ನಾಟಕದ ಮಾತುಗಳಿಗೆ ಕುಮ್ಮಕ್ಕು ಕೊಡುವಂತೆ ಸಂಗೀತಗಾರರು ವಾದ್ಯಗಳನ್ನೂ, ಕೊರಳನ್ನೂ ಸೇರಿಸುತ್ತಿದ್ದುದು ಈ ಪ್ರದರ್ಶನ ಹೆಚ್ಚುಗಾರಿಕೆ.

ಒಟ್ಟಾರೆ, ನಾಟಕ ಮುಗಿದುದೇ. ಒಂದು ಬಗೆಯಲ್ಲಿ ಎದೆಯನ್ನು ತಟ್ಟಿತು. ಪ್ರತಿ ಒಂದು ರಂಗ ರೂಪದ ಕಡೆಯಲ್ಲಿ ನೋಡುಗರಿಗೆ ಒಂದು ಧರ್ಮದ ಪ್ರಶ್ನೆಯನ್ನು ಹಾಕಿ ಅವರನ್ನು ಮತ್ತೆ ಮತ್ತೆ ಅದರ ಬಗ್ಗೆ ತಲೆ ಕೆಡಿಸಿಕೊಳ್ಳುವಂತೆ ಮಾಡಿದ್ದು ಈ ಭೈರಪ್ಪನವರ ಹಾಗೂ ಬೆಳವಾಡಿಯವರ ಜಾಣ್ಮೆ. ಹೆಣ್ಣು, ಸೂತ, ಇವರಂಗಗಳನ್ನು ಹಿಂಜಿ, ತಮ್ಮ ಧರ್ಮ ಸಾಧನೆಯನ್ನು ಮಾಡುತ್ತಿದ್ದ ಆಗಿನ ಕ್ಷತ್ರಿಯ ಬುಡಕಟ್ಟಿನವರನ್ನು ನಿಜರೂಪದಲ್ಲಿ ತೋರಿಸುವುದೇ ಈ ನಾಟಕದ ಗುರಿ. ಆದರೆ ಮುಂಬಯಿಯ ನೋಡುಗರ ಮೆಚ್ಚುಗೆಯನ್ನು ಗಳಿಸುವುದರಲ್ಲಿ ಬೆಳವಾಡಿಯವರು ಹಾಗೂ ಕಾರ್ಯಪ್ಪನವರು ಗೆದ್ದಿದ್ದಾರೆ ಎನ್ನುವುದನ್ನು ನಾವೆಲ್ಲರೂ ಒಪ್ಪಬೇಕು.

# ಮೈಸೂರು ಅಸೋಸಿಯೇಷನ್ನಿನಲ್ಲಿ – ಮುಂಬರುವ ಕಾರ್ಯಕ್ರಮಗಳು

## GROUP DISCUSSION

9 ಜುಲೈ 2022, ಶನಿವಾರ ಸಂಜೆ 5.30

“ಪರ್ವ - ರಂಗಾಯಣ ನಾಟಕದ ಬಗ್ಗೆ ಚರ್ಚೆ”



14 ಆಗಸ್ಟ್, ಭಾನುವಾರ– ಬೆಳಿಗ್ಗೆ 10.30 ರಿಂದ

"ಮುಂಬಯಿ ಕನ್ನಡ ರಂಗ ಭೂಮಿ ಉಳಿವು ಬೆಳವು– ವಿಚಾರ ಸಂಕಿರಣ”



ಆಗಸ್ಟ್ 15, 2022 ಸೋಮವಾರ

ಬೆಳಿಗ್ಗೆ ಗಂಟೆ 10.00ಕ್ಕೆ ಧ್ವಜಾರೋಹಣ



ಭಾನುವಾರ ಆಗಸ್ಟ್ 28, 2022

ಸಂಜೆ 5.00

“ಕೈಲಾಸಂ ಸಂಸ್ಮರಣೆ”

ಅಹಲ್ಯಾ ಬಲ್ಲಾಳರಿಂದ

ಏಕ ವ್ಯಕ್ತಿ ರಂಗ ಪ್ರಯೋಗ

Edited by Dr. Jyothi Satish, Printed & Published by Hon. Secretary, The Mysore Association Bombay, Mumbai - 400019. Tel: 2403 7065
Email : mysoreassociation.mumbai@gmail.com Website: www.mysoreassociation.in Printed by Aarati Art Printers, Fort, Mumbai - 1 Mob.: 98201 60077